# ಪ್ರಾಚೀನ ಹೆಗ್ಗುರುತು



ಆಶೀಶ್ ರಾಯಚೂರು

ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ ಮತ್ತು  ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಥಮ ಪ್ರತಿ: ಡಿಜಿಟಲ್ ಬಿಡುಗಡೆ ಮೇ 2021
ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ:ಕರುಣಾಜೆರೋಮ್, ಬ್ರೈಫ್ಯೆಯ್ಡ್ ಡಿಸೈನ್ಸ್

Contact information:
All Peoples Church& World Outreach,
#319,2nd Floor, 7th Main, HRBR Layout,
2nd Block, Kalyan Nagar, Bangalore 560043
Karnataka INDIA

Phone: +91-80-25452617
Email: bookrequest@apcwo.org
Website: apcwo.org

Unless otherwise indicated, all Scripture quotations are taken from the Holy Bible, New king lames Version. Copyright @1982 by Thomas Nelson, inc., Used by permission. All right reserved.
Scriptures marked as  "(MSG)" are taken from THE MESSAGE: The Bible in Contemporary Language copyright 2002 by Eugene H. Peterson.
Scripture marker as" (GNB)" are taken from the GNB-Second Edition ©1992 by American Bible Society Used by permission.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

ಮೇಲಿಂಗ್  ಪಟ್ಟಿ ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ
ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - Ancient landmarks)

# ಪ್ರಾಚೀನ ಹೆಗ್ಗುರುತು

ಯೆಹೋವನು ಹೀಗೆ ನುಡಿಯುತ್ತಾನೆ- ದಾರಿಗಳು ಕೂಡುವ ಸ್ಥಳದಲ್ಲಿ ನಿಂತುಕೊಂಡು ನೋಡಿ
ಪುರಾತನ ಮಾರ್ಗಗಳು ಯಾವವು, ಆ ಸನ್ಮಾರ್ಗವು ಎಲ್ಲಿ ಎಂದು ವಿಚಾರಿಸಿ ಅದರಲ್ಲೇ ನಡೆಯಿರಿ
ಇದರಿಂದ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವುದು.
ಯೆರೆಮಿಯ 6:16

# ಪರಿವಿಡಿ


1. ನಮ್ಮ ಸುತ್ತಲಿನ ಪ್ರಪಂಚವು ಬದಲಾಗುತ್ತಿದೆ ........ 1
2. ಕ್ರೈಸ್ತ ಪ್ರಪಂಚದ ಅಡ್ಡಲಾಗಿ ಬದಲಾವಣೆ ಗಾಳಿಗಳು ಬೀಸುತ್ತಿವೆ ........ 4
3. ಪ್ರಾಚೀನ ಹೆಗ್ಗುರುತುಗಳು ಯಾವುವು? ........ 6
4. ನಮ್ಮ ಪ್ರಾಚೀನ ಹೆಗ್ಗುರುತುಗಳು ........ 11
5. ಕೆಲಸದ ಸ್ಥಳಕ್ಕಾಗಿ ಪ್ರಾಚೀನ ಹೆಗ್ಗುರುತುಗಳು ........ 17
6. ಬದ್ಧತೆಗಾಗಿ ಕರೆ ........ 25

# 1. ನಮ್ಮ ಸುತ್ತಲಿನ ಪ್ರಪಂಚವು ಬದಲಾಗುತ್ತಿದೆ

"ಪ್ರಾಚೀನ ಮಾರ್ಗಗಳು" ನನ್ನ ಹೃದಯದಲ್ಲಿ ಕೆಲವು ಸಮಯದಿಂದ ಸಾಗಿಸುತ್ತಿರುವ ಸಂದೇಶವಾಗಿದೆ. ಅದನ್ನು ನಾನು ಈಗ ಈ ಪುಸ್ತಕದ ಮೂಲಕ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ನಾನು ಬಿಟ್ಟು ಹೊರಡುವ ಸ್ಥಳದಿಂದ ಓಟವನ್ನು ಮುಂದುವರೆಸುವ ಮುಂದಿನ ಪೀಳಿಗೆಗೆ ಕಿರುಗೋಲಿನ ಮೇಲೆ ಹಾದು ಹೋಗುವಾಗ ನಾನು ಪ್ರಸಂಗಿಸುವ ಕೊನೆಯ ಸಂದೇಶಗಳಲ್ಲಿ ಒಂದು ಬಗೆಯಲ್ಲಿ ನಾನು ಪ್ರಸಂಗಿಸುವ ಸಂದೇಶ ಇದಾಗಿರಬಹುದು. ಈ ಸಂದೇಶವು ಪ್ರಾಥಮಿಕವಾಗಿ ಬೆಂಗಳೂರಿನಂತಹ ಸರ್ವರಾಷ್ಟ್ರ ಪ್ರೇಮಿಯ ನಗರದ ಸಭೆ ಉದ್ದೇಶಿಸುತ್ತದೆ ಮತ್ತು ಭಾರತದ ಸಣ್ಣ ಪಟ್ಟಣಗಳು ಮತ್ತು ಹಳ್ಳಿಗಳಲ್ಲಿನ ಓದುಗರಿಗೆ ತಕ್ಷಣವೇ ಅನ್ವಯವಾಗದಿರಬಹುದು.

## ನಾವು ಜೀವಿಸುವ ರೀತಿಯಲ್ಲಿ ಬದಲಾವಣೆಗಳು

ವಯಸ್ಕರುಗಳಾದ ನಾವು (25+ನಲ್ಲಿರುವವರು) ಮತ್ತು ಸಹಸ್ರ ತಲೆ ಮಾರಿನವರು (1984 ಮತ್ತು 2001 ನಡುವೆ ಜನಿಸಿದವರು) ಇವರುಗಳ ನಡುವೆ ನಾವು ಒಂದು ಹೋಲಿಕೆ ಮಾಡಿದರೆ ನಾವು ಬೆಳೆಯುತ್ತಿರುವ ಪ್ರಪಂಚಗಳಲ್ಲಿ ಅನೇಕ ವ್ಯತ್ಯಾಸಕರವಾದ ಸಂಗತಿಗಳ ಪಟ್ಟಿ ಮಾಡಬಹುದು:

- ನಾವು ಒಂದು ಕಪ್ಪು ಬಿಳುಪು ಬಿಳಿಬಣ್ಣದ ಟಿವಿ ಮತ್ತು ದೂರದರ್ಶನ ಎಂಬ ಒಂದು ಚಾನಲ್ ಹೊಂದಿದ್ದೇವು. ಸಹಸ್ರ ವರ್ಷಗಳು ಪೊಗೊ, ಎನ್.ಬಿ.ಸಿ, ಎಂ.ಟಿ.ವಿ, ಸ್ಟಾರ್ ವರ್ಲ್ಡ್ ಮುಂತಾದವುಗಳಿಂದ ಬೆಳೆಯುತ್ತಿದೆ. ಸಹಸ್ರ ವರ್ಷಗಳು ಮಾಧ್ಯಮದಲ್ಲಿ ಪ್ರಗತಿ ಹೊಂದುತ್ತವೆ.

- ನಾವುಗಳು ಅಂಬಾಸಿಡೋರ್ಸ್, ಪ್ರೀಮಿಯರ್ ಪದ್ಮಿನಿಸ್, ಮಾರುತಿಸ್, ಟಾಟಾ, ಬಿರ್ಲಾ ಮುಂತಾದವುಗಳೊಡನೆ ಬೆಳೆದವು. ಅವರುಗಳು ಹೊಂಡಾಸ್, ಟಯೋಟಾಸ್, ಬಿ.ಎಮ್.ಡಬ್ಲ್ಯೂ, ಮೈಕ್ರೋಸಾಫ್ಟ್, ಐ.ಬಿ.ಎಂ, ಗೂಗಲ್ ಮುಂತಾದವುಗಳೊಡನೆ ಬೆಳೆಯುತ್ತಿದ್ದಾರೆ.

- ನಾವುಗಳು ಥಮ್ಸಪ್, ಬಜಾಜ್ ಮತ್ತು ಪಾಂಟಾದೊಡನೆ ಬೆಳೆದವು. ಅವರು ಕೋಕ್, ಡಯಟ್ ಕೊಕ್ ಮತ್ತು ಪೆಪ್ಸಿಯೊಡನೆ ಬೆಳೆಯುತ್ತಿದ್ದಾರೆ.

- ಸ್ಥಳೀಯ "ಊಟ ತಯಾರಿದೆ" ಎಂಬ ಕಾಮತ್ ರೆಸ್ಟೋರೆಂಟ್‌ನಲ್ಲಿ ಕಾಫಿ ಕುಡಿದಿದ್ದೇವು. ಅವರು ಕೆಫೆ ಕಾಫಿಡೇ ಹೊಂದಿದ್ದಾರೆ.

- ನಾವು ಮನೆಯಲ್ಲಿ ಒಂದು ಡಯಲ್ ಫೋನ್ ಹೊಂದಿದ್ದರೆ ಅದು ದೊಡ್ಡ ವಿಷಯವಾಗಿತ್ತು.
  ನೆರೆಯವರ ಫೋನ್ ಕರೆಗಳನ್ನು ಮಾಡಲು ಕೆಲವು ಬಾರಿ ಭೇಟಿ ಮಾಡುತ್ತಿದ್ದರು. ಅವರು ಪಿ.ಡಿ.ಎಗಳು, ಎಸ್.ಎಂ.ಎಸ್ ಮುಂತಾದವುಗಳೊಡನೆ ಬೆಳೆಯುತ್ತಿದ್ದಾರೆ.

ಅವರಲ್ಲಿ ಅನೇಕರು ಎಂದಿಗೂ ಫೋನ್ ಅನ್ನು ಡಯಲ್ ಮಾಡಿಲ್ಲ ಮತ್ತು ಎಂದಿಗೂ ಮಾಡುವುದಿಲ್ಲ!

- ನಾನು ಕಾಲೇಜ್‌ಗೆ ಹೋಗುವವರೆಗೂ ಕಂಪ್ಯೂಟರ್‌ನ್ನ ಮೇಲೆ ಕೆಲಸ ಮಾಡಿಲ್ಲ ಮತ್ತು ನಾನು 20ವರ್ಷದವನಾಗಿದ್ದಾಗ ತುಂಬಾ ಕಷ್ಟದೊಡನೆ ಮೊದಲ ಪವರ್‌ಪ್ವಾಯಿಂಟ್ ಪ್ರಸ್ತುತಿ ಮಾಡಿದೆನು. ಇಂದು ನನ್ನ ಹತ್ತು ವರ್ಷದ ಮಗನಾದ ಜೋಸುವಾ ಪವರ್ ಪಾಯಿಂಟ್‌ನಲ್ಲಿ ಆ್ಯನಿಮೇಟೆಡ್ ಪ್ರಸ್ತುತಿಗಳನ್ನು ಅವನ ಎಂಪಿ 4 ಗೆ ಸಂಗೀತವನ್ನು ಡೌನ್ಲೋಡ್ ಮಾಡುತ್ತಾನೆ, ಗೂಗಲ್ ಹುಡುಕಾಟಗಳ, ವಿಕಿಪೀಡಿಯಾದಲ್ಲಿ ಸಂಶೋಧನೆ ಮಾಡುತ್ತಾನೆ. ಮತ್ತು ನನ್ನ ಏಳು ವರ್ಷದ ಮಗಳಾದ ರೂತಳು ತುಂಬಾ ಹಿಂದುಳಿದಿಲ್ಲ, ಅವಳ ಸಹೋದರನಿಂದ ಕಲಿಯುತ್ತಿದ್ದಾಳೆ!

- ನಾವು ಆಟವಾಡುವಾಗ, ನಮ್ಮ ರಸ್ತೆಗಳ ಮೇಲಿನ ಮಕ್ಕಳುಗಳು ನಮ್ಮ ಸ್ನೇಹಿತರಾಗಿದ್ದರು. ಇಂದಿನ ಹದಿಹರೆಯದವರು ತ್ವರಿv ಸಂದೇಶ ಕಳುಹಿಸುವಿಕೆ, ಬ್ಲಾಗ್‌ಗಳು, ಆನ್‌ಲೈನ್ ಸಮುದಾಯಗಳಾದ ಆರ್ಕುಟ್, ಮೈಸ್ಪೇಸ್, ಫೇಸ್‌ಬುಕ್ ಮತ್ತು ಇತg ಸಾಮಾಜಿಕ ನೆಟ್‌ವರ್ಕಿಂಗ್ ಸೈಟ್‌ಗಳಿಂದ ಸಂಪರ್ಕ ಹೊಂದಿದ ಜಾಗತಿಕ ಸಮುದಾಯದಲ್ಲಿ ವಾಸಿಸುತ್ತಿದ್ದಾರೆ.

ನಾವು ಇರುವಂತಹ ಈ ಪ್ರಪಂಚದಲ್ಲಿ ನಮ್ಮ ಹದಿಹರೆಯದವರು ಮತ್ತು ಮಕ್ಕಳುಬೆಳೆಯುತ್ತಿರುವುದು- ನಾವು ಬೆಳೆದಂತಹ ಪ್ರಪಂಚದಿಂದ ಬಹಳ ವಿಭಿನ್ನವಾಗಿದೆ.

ಹದಿಹರೆಯದವರು ಮತ್ತು ಮಕ್ಕಳು ಸ್ಥಳೀಯರು ಇದ್ದಂತೆ – ಅವರು ಬೆಳೆದಿದ್ದಾರೆ ಅಥವಾ ಈ ಹೊಸ ಪ್ರಪಂಚದಲ್ಲಿ ಬೆಳೆಯುತ್ತಿದ್ದಾರೆ! ನಾವು ಈ ಹೊಸ ಪ್ರಪಂಚದ ವಲಸಿಗರು ಆಗಿದ್ದೇವೆ!

## ನಮ್ಮ ನಗರದಲ್ಲಿ ಬದಲಾವಣೆ

### ವೇತನಗಳು

ಹಿಂದೇ, ಐದುವರೆ ವರ್ಷಗಳ ತೀವ್ರ ಅಧ್ಯಯನದ ನಂತರ ಮತ್ತು ಇನ್ನೂ ಕೆಲವು ವರ್ಷಗಳ ಪ್ರಾವೀಣ್ಯತೆಯಿಂದ ಒಬ್ಬ ವೈದ್ಯನು ಪ್ರಾರಂಭದ ವೇತನವನ್ನು 3,000 ರೂಗಳನ್ನು ಗಳಿಸಿದರು. ಇಂದು, ಕಾಲೇಜು ತೊರೆದವರು ಒಂದು ಕಾಲ್ ಸೆಂಟರ್‌ನ್ನಲ್ಲಿ ಕೆಲಸ ಮಾಡಿ ಸುಮಾರು 15,000 ರೂಪಾಯಿ ಗಳಿಸುತ್ತಿದ್ದಾರೆ!

### ಸೂಪರ್ ಮಾರ್ಕೆಟ್‌ಗಳಿಂದ ಶಾಪಿಂಗ್ ಮಾಲ್‌ಗಳಿಗೆ

ನಾವು ಬೆಳೆಯುತ್ತಿರುವಾಗ, ನಮ್ಮ ಶಾಪಿಂಗ್ ಅನ್ನು ಸಾಮಾನ್ಯವಾಗಿ ಸ್ಥಳೀಯ ಸೂಪರ್ ಮಾರ್ಕೆಟ್‌ಗಳು ಅಥವಾ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಮಾಡಿದ್ದೇವು, ಅದರ ಬಗ್ಗೆ ಹೆಚ್ಚು ಮಾತನಾಡಲು ಸಾಧ್ಯವಾಗಲಿಲ್ಲ. ಹವಾನಿಯಂತ್ರಕ, ಎಲಿವೇಟರ್ ಅಥವಾ ಎಸ್ಕಲೇಟರ್ ಇರಲಿಲ್ಲ. ಇಂದು ನಮ್ಮ ನಗವು ಹವಾ-ನಿಯಂತ್ರಕಗಳು, ಬಹುಮಹಡಿ ಶಾಪಿಂಗ್ ಮಾಲ್‌ಗಳು ಅಂತರಾಷ್ಟ್ರೀಯ ಸಿದ್ಧವಾಗಿ ದೊರೆಯುವ ಬ್ರ್ಯಾಂಡ್‌ಗಳು ಲಭ್ಯವಿದೆ. ಇವುಗಳ ಜೊತೆಗೆ ಜೀವನ ಶೈಲಿಯಲ್ಲಿ ಜೀವಿತದ ಮೇಲಿನ ದೃಷ್ಟಿಕೋನ ಮುಂತಾದವುಗಳಲ್ಲಿ ಅಸಂಖ್ಯಾತ ಬದಲಾವಣೆ ನೋಡುತ್ತೇವೆ.

# ವಿಶ್ವ ದೃಷ್ಟಿಕೋನದಲ್ಲಿ ಬದಲಾವಣೆಗಳು: ಆಧುನಿಕತಾವಾದ ಮತ್ತು ನಂತರದ ಆಧುನಿಕತಾವಾದ

ಕಳೆದ 40 ವರ್ಷಗಳಲ್ಲಿ ಇತ್ತೀಚಿನ ದಶಕದಲ್ಲಿ ಜಾಗತಿಕವಾಗಿ ಅಥವಾ ವಿಶ್ವ ದೃಷ್ಟಿಕೋನವು ಸ್ಥಿರವಾಗಿ ಬದಲಾಗುತ್ತಿದೆ ಅಥವಾ 'ಆಧುನಿಕ'ದಿಂದ 'ಆಧುನಿಕೋತ್ತರ' ಚಿಂತನೆಗೆ ಬದಲಾಗಿದೆ ಎಂದು ಸಮಾಜ ಶಾಸ್ತ್ರಜ್ಞರು ಹೇಳುತ್ತಾರೆ. ನಮ್ಮಲ್ಲಿ ಹೆಚ್ಚಿನವರು ಆಧುನಿಕ ಪ್ರಪಂಚದಲ್ಲಿ ಬೆಳೆದಿದ್ದೇವೆ. ನಮ್ಮ ಹದಿಹರೆಯದವರು ಮತ್ತು ಮಕ್ಕಳು "ಆಧುನಿಕೋತ್ತರ" ವಿಶ್ವ ದೃಷ್ಟಿಕೋನದಲ್ಲಿ ಬೆಳೆಯುತ್ತಿದ್ದಾರೆ.

## ಆಧುನಿಕತಾವಾದ

ಆಧುನಿಕತಾವಾದವು ಜ್ಞಾನೋದಯದೊಡನೆ ಪ್ರಾರಂಭಗೊಂಡಿದೆ. ವೈಜ್ಞಾನಿಕ ವಿಧಾನವು ರೂಢಿಯಾಗಿತ್ತು. ವಿಜ್ಞಾನ ಮತ್ತು ಬೌದ್ಧಿಕ ಸಮಗ್ರತೆ ಮೂಲಕ ಪ್ರಪಂಚದ ತೊಂದರೆಗಳೆಲ್ಲವು ಬಗೆಹರಿಸಲ್ಪಡುತ್ತವೆ ಎಂದು ಅರ್ಥಗೊಂಡಿತ್ತು. ಸತ್ಯ ವಸ್ತುನಿಷ್ಟವಾಗಿತ್ತು. ಸತ್ಯವು ಸ್ವಯಂ - ಸ್ಪಷ್ಟವಾಗಿತ್ತು. ವಿಷಯಗಳು ಕಪ್ಪು ಮತ್ತು ಬಿಳಿ ಬಣ್ಣದ್ದಾಗಿದ್ದವು. ಆಧುನಿತಾವಾದದ ತೊಂದರೆಯೆಂದರೆ ವ್ಯಕ್ತಿತ್ವ ಮತ್ತು ಸ್ವಕೇಂದ್ರೀಯತೆ.

## ಆಧುನಿಕೋತ್ತರತೆ

ಸಾಪೇಕ್ಷತೆ ಮತ್ತು ಕಾರಣವಲ್ಲದ್ದು ರೂಢಿಯಾಗಿದೆ. "ಯಾವುದೇ ಸಂಗತಿಗಳಿಲ್ಲ, ವ್ಯಾಖ್ಯಾನಗಳು ಮಾತ್ರ" (ಫೆಡ್ರಿಕ್ ನೀತ್ಸೆ) ನೈತಿಕತೆ ಒಂದು ಸಾಪೇಕ್ಷ ವಿಷಯ ನೀವು ಬದುಕಲು ಬಯಸುವ ನಿಮ್ಮ ಸ್ವಂತ ನೈತಿಕ ಮಾನದಂಡಗಳನ್ನು ನೀವು ರೂಪಿಸಿ ಕೊಳ್ಳುತ್ತೀರಿ. ನೀವು ವ್ಯಕ್ತಪಡಿಸಲು ಸ್ವತಂತ್ರರು ಮತ್ತು ನೀವು ತಪ್ಪು ಎಂದು ಯಾರೂ ಹೇಳಲು ಸಾಧ್ಯವಿಲ್ಲ. ವೈಯಕ್ತಿಕ ಅನುಭವವು ಪ್ರಾಯೋಗಿಕ ಸಾಕ್ಷ್ಯ ಮತ್ತು ವಸ್ತುನಿಷ್ಟ ಸತ್ಯದ ಶಕ್ತಿಯನ್ನು ಅತಿಕ್ರಮಿಸುತ್ತದೆ. ಸತ್ಯವು ರಾಜಿಮಾಡಿಕೊಂಡಿದ್ದರೂ ಸಹನೆ ಸಹಿಷ್ಣತೆಯಾಗಿದೆ. ದೇವರು ಯಾರಾಗಬೇಕೆಂಬುದಾಗಿ ನೀವು ಅಂದುಕೊಂಡತ್ತಿರುತ್ತಾನೆ. ನಮ್ಮ ಹದಿಹರೆಯದವರು ಮತ್ತು ಮಕ್ಕಳು ಒಂದು ಸವಾಲುಳ್ಳ ಪ್ರಪಂಚದಲ್ಲಿ ಬೆಳೆಯುತ್ತಿದ್ದಾರೆ. ನಂಬಿಕೆಗಳು, ಮೌಲ್ಯಗಳು ಮತ್ತು ಜೀವನ ಶೈಲಿ; ಜೀವನದ ಪ್ರಮುಖ ವಿಷಯಗಳಿಗೂ ಸಹ ಆಯ್ಕೆ ಮಾಡಲು ಅವರಿಗೆ ಅನೇಕ ಆಯ್ಕೆಗಳು ಅವರಿಗೆ ಪ್ರಸ್ತುತಗೊಂಡಿವೆ.

ನಮ್ಮ ವಿಶ್ವದ ಹದಿಹರೆಯದವರು ಮತ್ತು ಮಕ್ಕಳು ಬೆಳೆಯುತ್ತಿರುವ ಪ್ರಪಂಚವು ನಾವು ಈಗ ಇರುವ ಜಗತ್ತಿನಲ್ಲಿ ನಾವು ಬೆಳೆದ ಪ್ರಪಂಚಕ್ಕಿಂತ ಬಹಳ ಭಿನ್ನವಾಗಿದೆ. ಹದಿಹರೆಯದವರು ಮತ್ತು ಮಕ್ಕಳು ಸ್ಥಳೀಯರು ಅವರು ಬೆಳೆದರು ಮತ್ತು ಈ ಹೊಸ ಜಗತ್ತಿನಲ್ಲಿ ಬೆಳೆಯುತ್ತಿದ್ದಾರೆ! ನಾವು ಈ ಹೊಸ ಜಗತ್ತಿನಲ್ಲಿ ವಲಸಿಗರು ಆಗಿದ್ದೇವೆ

# 2. ಕ್ರೈಸ್ತ ಪ್ರಪಂಚದ ಅಡ್ಡಲಾಗಿ ಬದಲಾವಣೆ ಗಾಳಿಗಳು ಬೀಸುತ್ತಿವೆ

## ನಾವು ಸಭೆ ಮಾಡುವ ರೀತಿಯಲ್ಲಿ ಬದಲಾವಣೆಗಳು

ನಾವು ಕ್ರೈಸ್ತ ಪ್ರಪಂಚದಲ್ಲಿ ಹಲವಾರು ಬದಲಾವಣೆಗಳನ್ನು ನೋಡಿದ್ದೇವೆ. ಉದಾಹರಣೆಗೆ, ನಾವು ಸಭೆಗಳ ಕೂಟದಿಂದ ವರ್ಣರಂಜಿತ ಗಾಜಿನಲ್ಲಿ, ಗುಡಿಗೋಪುರದ ಕಟ್ಟಡಗಳಿಂದ ಹವಾ-ನಿಯಂತ್ರಿತ ಸಂಭಾಗಣಗಳಿಗೆ, ಸಮಾವೇಶ ಕೇಂದ್ರಗಳು ಮುಂತಾದವುಗಳೆಡೆಗೆ ನಾವು ಹೋಗಿದ್ದೇವೆ. ನಾವು ಹಾಡುವಂತಹ ಹಾಡುಗಳಲ್ಲಿ, ನಾವು ಸ್ತುತಿ ಗೀತೆಗಳಿಂದ ಕೋರಸ್ (ಸುವ್ವಿಗಳಿಗೆ) ಮತ್ತು ಆರಾಧನೆಯ ಸಮಕಾಲೀನ ಸ್ತುತಿ ಸ್ತೋತ್ರ ಮತ್ತು ಆರಾಧನೆಯ ಹಾಡುಗಳಿಗೆ ಪರಿವರ್ತನೆಗೊಂಡಿದ್ದೇವೆ. ನಾವುಗಳು ಸ್ತುತಿಗೀತೆ ಪುಸ್ತಕಗಳಿಂದ ಪಲ್ಲವಿಗಳ ಹಾಳೆಗಳಿಗೂ ನೆತ್ತಿಯ ಮೇಲ್ಗಡೆಯ ಪ್ರೊಜೆಕ್ಟರ್ ನಿಂದ ದೊಡ್ಡ ಪರದೆಯ ಮೇಲೆ ಎಲ್ಸಿಡಿ ಪ್ರೊಜೆಕ್ಟರ್‌ಗಳಿಗೆ ಬದಲಾವಣೆ ಹೊಂದಿದ್ದೇವೆ. ಕೂಟಗಳಲ್ಲಿನ ಪ್ರಸ್ತುತಿಯು ನಾಟಕಗಳು/ ಸ್ಕಿಟ್‌ಗಳು/ ಸಂಗೀತಗಳಿಂದ ಈಗ ವೀಡಿಯೋಗಳು ಮತ್ತು ಕಿರುಚಿತ್ರಗಳಿಗೆ ಪರಿವರ್ತನೆಯಾಗಿವೆ.

## ಪ್ರಸಂಗಿಸಲ್ಪಟ್ಟ ಸಂದೇಶದಲ್ಲಿ ಬದಲಾವಣೆಗಳು

ಸಕಾರಾತ್ಮಕ ಭಾಗದಲ್ಲಿ, ನಾವು ದೇವರ ವಾಕ್ಯದ ತಿಳುವಳಿಕೆಯಲ್ಲಿ ಹೆಚ್ಚಳವನ್ನು ನೋಡಿದ್ದೇವೆ. 1400 ರಲ್ಲಿ ಮಾರ್ಟಿನ್ ಲೂಥರ್‌ನೊಡನೆ ಸುಧಾರಣೆಯಿಂದ ಪ್ರಾರಂಭಗೊಂಡು ವಿಶೇಷವಾಗಿ ಕಳೆದ 50 ವರ್ಷಗಳಲ್ಲಿ ನಾವು ಬಹಳ ದೂರ ಬಂದಿದ್ದೇವೆ. ದೇವರ ವಾಕ್ಯವನ್ನು ಜೀವಿತದ ಎಲ್ಲಾ ನಡೆಗಳಿಗೂ ಅನ್ವಯಿಸುವಂತೆ ಮಾಡಲಾಗಿದೆ. ಆದಾಗ್ಯೂ ಪ್ರಪಂಚದಾದ್ಯಂತ ಪ್ರವಚನ ಪೀಠದಲ್ಲಿ ಅನೇಕ ಅಪಾಯಕಾರಿ ಸಂಗತಿಗಳು ಚಿಗುರುತ್ತಿವೆ. ಸಭಾಪಾಲಕರು ಮತ್ತು ಸಂದೇಶಕರು ಆಕರ್ಷಣೆಯ ಪ್ರಯತ್ನದಲ್ಲಿ ಮತ್ತು ದೊಡ್ಡ ಸಭಿಕರ ಗುಂಪನ್ನು ಇರಿಸುವ ಸಲುವಾಗಿ ರಾಜಿ ಮಾಡಿಕೊಳ್ಳದಿರುವಂತಹ ದೇವರ ವಾಕ್ಯದಿಂದ ಆಧುನಿಕೋತ್ತರ ತತ್ವಶಾಸ್ತ್ರ, ಉತ್ತಮ ಸಂದೇಶಗಳನ್ನು—ಭಾವಿಸುವುದು. ಭಾನುವಾರ ಬೆಳಿಗ್ಗೆಯ ಮನೋ-ರಗಳೆಗಳಿಗಿಂತ ಹೆಚ್ಚೇನೂ ಅಲ್ಲದ ನಿಮ್ಮನ್ನು ಹುರಿದುಂಬಿಸುವ ಪ್ರೇರಕ ಭಾಷಣಗಳು ಮುಂತಾದವುಗಳಿಂದ ಆವರಿಸಲ್ಪಟ್ಟಿವೆ. ಅಂತಹ ಪ್ರವಚನ ಪೀಠಗಳಲ್ಲಿ ದೇವರ ವಾಕ್ಯವು ಇಬ್ಬಾಯಿ ಕತ್ತಿಯಂತೆ ಅಥವಾ ಸುತ್ತಿಗೆಯಂತೆ ಅಥವಾ ಬೆಂಕಿಯಂತೆ ಇರುವುದಿಲ್ಲ. ಆದರೆ ಆತ್ಮಕ್ಕೆ ಹಿತವಾದ ಮಸಾಜ್ ಮತ್ತು ಆರಾಮದಾಯವಾಗಿ ಮಲಗುವ ಒಂದು ಮಂಚವಾಗಿರುತ್ತದೆ! ಅವರು ಪಾಪವನ್ನು ಎದುರಿಸಲು ಅಥವಾ ಜನರನ್ನು ಪಾಪದ ಅರಿಕೆಗೆ ನಡೆಸುವುದನ್ನು ನಿರಾಕರಿಸುತ್ತಾರೆ. ಅವರು ನರಕ ಅಥವಾ ಸ್ವರ್ಗದ ನೈಜತೆಯ ಕುರಿತು ಮಾತನಾಡುವುದಿಲ್ಲ. ಸಂಖ್ಯೆಗಳು ಕ್ಷೀಣಿಸದಂತೆ ಇರಲು ಅವರು ಪ್ರಸಂಗಿಸುವ ರೀತಿಯ ಸಂದೇಶಗಳು ಇವಲ್ಲ.

# ಸಂದೇಶ ವಿತರಣೆಯಲ್ಲಿ ಬದಲಾವಣೆಗಳು

ನಾವಿರುವಂತಹ ಮಾಹಿತಿಯ ಯುಗದಲ್ಲಿ, ಎರಡು ಸಂಗತಿಗಳು ಸಹಸ್ರಮಾನದ ಸಂತತಿ ಮತ್ತು ಸಾಮಾನ್ಯವಾಗಿ ಜನರನ್ನು ನಿರೂಪಿಸುತ್ತವೆ.

- ಅವರು ಬರೀ ಕೇಳಿಸಿಕೊಳ್ಳುವುದನ್ನು ಬಯಸುವುದಿಲ್ಲ; ಅವರ ಎಲ್ಲಾ ಇಂದ್ರಿಯಗಳು ತೊಡಗಿಕೊಂಡಿರಬೇಕೆಂದು ಬಯಸುತ್ತಾರೆ. ಅವರಿಗೆ ಸಂದೇಶ ಬೇಡ ಆದರೆ ಪರಿವರ್ತನೆಯಲ್ಲಿ ಫಲಿತಾಂಶವನ್ನು ಅನುಭವಿಸಬೇಕೆಂದು ಅಪೇಕ್ಷಿಸುತ್ತಾರೆ. ವಿಪರ್ಯಾಸವೆಂದರೆ, ಹೆಚ್ಚುತ್ತಿರುವ ಮಾಹಿತಿಯೊಂದಿಗೆ ಗಮನವನ್ನು ಕಡಿಮೆಗೊಳಿಸುವುದನ್ನು ನಾವು ನೋಡುತ್ತೇವೆ.

- ಸಕಾರಾತ್ಮಕ ಬದಿಯಲ್ಲಿ, ಎಲ್ಲಾ ಇಂದ್ರಿಯಗಳನ್ನು ತೊಡಗಿಸಿಕೊಳ್ಳುವ ಮತ್ತು ರೂಪಾಂತರಗೊಳ್ಳುವ ಅನುಭವವನ್ನು ಸೃಷ್ಟಿಸುವ ರೀತಿಯಲ್ಲಿ ಸಮಯವಿಲ್ಲದ ಸತ್ಯಗಳನ್ನು ತಲುಪಿಸುವ ಸಭೆಗಳನ್ನು ಮತ್ತು ಪ್ರಸಂಗಿಗಳು ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ನಾವು ನೋಡುತೇವೆ. ತಂತ್ರಜ್ಞಾನ ಮತ್ತು ಸೃಜನಶೀಲತೆ ಇದರಲ್ಲಿ ದೊಡ್ಡ ಪಾತ್ರ ವಹಿಸುತ್ತದೆ.

ಇದೆಲ್ಲವೂ ಒಳ್ಳೆಯದೆ ಆದಾಗ್ಯೂ ಇನ್ನೊಂದು ಕಡೆಯಲ್ಲಿ ಅಪ್ರಾಕೃತ ತೋರ್ಪಡಿಸುವಿಕೆಗಳಾದ- ಅದ್ಭುತಗಳು, ಸೂಚಕಕಾರ್ಯಗಳು ಮತ್ತು ಮಹತ್ಕಾರ್ಯಗಳ ದೈವ- ಸಂಕಲ್ಪಿತ ಸಮೀಪಿಸುವಿಕೆಯಿಂದ ಮತ್ತು “ಪವಿತ್ರಾತ್ಮನ ಬಲದ” ಪ್ರಾಚೀನ ಹೆಗ್ಗುರುತುಗಳಲ್ಲಿ ಕೆಲವನ್ನು ನಾವು ಕಳೆದುಕೊಂಡಂತೆ ಕಾಣಿಸುವಂತೆ ಸೃಷ್ಟಿಶೀಲ ವಿಷಯಗಳ ಪ್ರಸ್ತುತಿ ಮತ್ತು ಅದನ್ನು ಅಧಿಕವಾಗಿ ಮಾಡುವುದರಲ್ಲಿ ದೃಷ್ಟಿಯು ಬದಲಾಯಿಸಲ್ಪಟ್ಟಿದೆ. ನಾವು ಪ್ರಾಣಾತ್ಮ ಮನರಂಜಿಸುವ ಸೇವೆಗಳೊಂದಿಗೆ ಕೊನೆಗೊಳ್ಳುತ್ತೇವೆ. ಅದು ಸಾವಿರಾರು ಜನರು ಆನಂದಿಸಲು ಬರುತ್ತಾರೆ. ಆದರೆ ಪವಿತ್ರಾತ್ಮದ ರೂಪಾಂತರಿಸುವ, ಸ್ವಸ್ಥಪಡಿಸುವ ಮತ್ತು ಬಿಡುಗಡೆಗೊಳಿಸುವ ಶಕ್ತಿಯನ್ನು ಕಸಿದುಕೊಳ್ಳುತ್ತಾರೆ. ಅಭಿಷೇಕಿಸಲ್ಪಟ್ಟ ಅಪೊಸ್ತಲರ ಪ್ರವಾದಿಗಳು, ಸಭಾಪಾಲಕರು, ಉಪದೇಶಕರು ಮತ್ತು ಸುವಾರ್ತಿಕರುಗಳ ಬದಲಿಗೆ ಸಮಾರಂಭ ವ್ಯವಸ್ಥಾಪಕರು, ಮನರಂಜನೆಗಾರರು, ವಾಗ್ಮಿಗಳು, ನಾಟಕಕಾರರು ಮತ್ತು ಪ್ರದರ್ಶಕರುಗಳಿಂದ ನಮ್ಮ ಪ್ರವಚನ ಪೀಠವು ಆಕ್ರಮಿಸಲ್ಪಟ್ಟಿರುವ ಅಪಾಯ ನಾವು ಹೊಂದಿದೇವೆ. ಕ್ರೈಸ್ತ ಪ್ರಪಂಚದಲ್ಲಿ ಅನೇಕ ಬದಲಾವಣೆಗಳನ್ನು ನೋಡಿದ್ದೇವೆ ನಾವು ಸಭೆ ಮಾಡುವ ವಿಧಾನದಲ್ಲಿ ಬದಲಾವಣೆಗಳು, ಪ್ರಸಂಗಿಸಲ್ಪಟ್ಟ ಸಂದೇಶದಲ್ಲಿ ಬದಲಾವಣೆಗಳು ಮತ್ತು ಸಂದೇಶವನ್ನು ತಲುಪಿಸುವಲ್ಲಿ ಬದಲಾವಣೆಗಳು

# 3. ಪ್ರಾಚೀನ ಹೆಗ್ಗುರುತುಗಳು ಯಾವುವು?

**ಜ್ಞಾನೋಕ್ತಿಗಳು 22:28**
**ನಿನ್ನ ಪಿತೃಗಳು ಹಾಕಿದ ಪೂರ್ವಕಾಲದ ಮೇರೆಯನ್ನು (ಗಡಿರೇಖೆಗಳು) ಒತ್ತಬೇಡ.**

**ಜ್ಞಾನೋಕ್ತಿಗಳು 23:10**
**ಪೂರ್ವಕಾಲದ ಮೇರೆಯನ್ನು ಒತ್ತಬೇಡ ಅನಾಥರ ಹೊಲಗಳಲ್ಲಿ ನುಗ್ಗದಿರು.**

ಜಾನ್‌ಗಿಲ್ ಅವರ ಸಂಪೂರ್ಣ ಸತ್ಯವೇದದ ನಿರೂಪಣೆಯ ಪ್ರಕಾರ, ಪ್ರಾಚೀನ ಹೆಗ್ಗುರುತುಗಳು "ಪ್ರಾಚೀನಗಡಿ" ಅಥವಾ 'ಮೇರೆ' ಎಂಬುದಾಗಿ ಉಲ್ಲೇಖಿಸುತ್ತದೆ, ಇದು ಭೂಮಿಗಳು, ಎಸ್ಟೇಟು, ಪಿತ್ರಾರ್ಜಿತ, ಗುರುತಿರುವವುಗಳು, ಸುತ್ತುವುದರಿಂದ, ಮತ್ತು ಪ್ರತ್ಯೇಕಿಸಲ್ಪಟ್ಟಂತಹ, ಪೂರ್ವಿಕರಿಂದ ಅವರ ನೆರೆಹೊರೆಯವರೊಡನೆ ಒಪ್ಪಂದದಲ್ಲಿ ಹೊಂದಿಸಲಾದ; ಅದನ್ನು ತೆಗೆದುಹಾಕುವುದು ಕಾನೂನಿಗೆ ವಿರುದ್ಧವಾಗಿದೆ ಮತ್ತು ಅದನ್ನು ಮಾಡಿದವರ ಮೇಲೆ ಶಾಪವನ್ನು ಖಂಡಿಸಲಾಗುತ್ತದೆ ಮತ್ತು ಆರಂಭಿಕ ಕಾಲದಲ್ಲಿ ಯಾವಾಗಲೂ ಅತ್ಯಂತ ಘೋರ ಅಪರಾಧವೆಂದು ಪರಿಗಣಿಸಲಾಗಿದೆ. ರೋಮನ್ನರಲ್ಲಿ ಇದು ತುಂಬಾ ಪವಿತ್ರವಾಗಿತ್ತು; ಅದು ಅವರ ಗಡಿಗಳ ಅಧ್ಯಕ್ಷತೆ ವಹಿಸುವ ದೇವತೆಯನ್ನು ಹೊಂದಿದ್ದರು ಮತ್ತು ಅವರಿಂದ ಅದರ ಹೆಸರನ್ನು ಹೊ ಧರ್ಮೋಪದೇಶಕಾಂಡ 19:14 ನಿಮ್ಮ ದೇವರಾದ ಯೆಹೋವನು ನಿಮಗೆ ಸ್ವದೇಶವಾಗುವುದಕ್ಕೆ ಕೊಡುವ ದೇಶದಲ್ಲಿ ನಿಮ್ಮ ಪಾಲಿಗೆ ಬಂದ ಸ್ವಾಸ್ತ್ಯದಲ್ಲಿ ನೆರೆಯವನ ಭೂಮಿಯ ಪೂರ್ವಕಾಲದ ಮೇರೆಯನ್ನು ಒತ್ತಬಾರದು.

**ಧರ್ಮೋಪದೇಶಕಾಂಡ 27:17**
**ಅವರು ಮತ್ತೊಬ್ಬನ ಮೇರೆಯನ್ನು ಸರಿಸಿದವನು ಶಾಪಗ್ರಸ್ತ ಎನ್ನಲಾಗಿ ಜನರೆಲ್ಲರೂ-ಹೌದು ಅನ್ನಬೇಕು.**

**ಹೋಶೇಯ 5:10**
**ಯೆಹೂದದ ಮುಖಂಡರು ಮೇರೆಯನ್ನು ಒತ್ತುವವರಂತಿದ್ದಾರೆ ಅವರ ಮೇಲೆ ನನ್ನ ರೌದ್ರವನ್ನು ನೀರಿಗೆ ಹಾಗೆ ಹೊಯ್ದುಬಿಡುವೆನು.**

ಪೂರ್ವಕಾಲದ ಮೇರೆಗಳನ್ನು ಚಲಿಸುವಲ್ಲಿ ನಾಯಕರುಗಳು ಸ್ವತಃ ತಪ್ಪಿತಸ್ಥರು ಮತ್ತು ದೇವರು ನ್ಯಾಯತೀರ್ಪನ್ನು ಅವರು ಗಳಿಸಿದರು. "ಪ್ರಾಚೀನ ಹೆಗ್ಗುರುತುಗಳು" ಮತ್ತು ಆಸ್ತಿಯ ಮೇಲಿನ ಗಡಿರೇಖೆಗಳೊಂದಿಗೆ ವ್ಯವಹರಿಸುವುದು ಎಂಬುದಾಗಿ ಮೊದಲೇ ಧರ್ಮಗ್ರಂಥದ ಭಾಗಗಳಲ್ಲಿ ಉಲ್ಲೇಖಿತವಾಗಿದೆ ಎಂದು ನಮಗೆ ತಿಳಿದಿದ್ದರೂ ನಾನು ಇದನ್ನು ಆತ್ಮೀಕ ವಿಷಯಗಳಿಗೆ ಭಾಷಾಂತರಿಸಲು ಬಯಸುತ್ತೇನೆ ಮತ್ತು ಇದನ್ನು ಈ ಪುಸ್ತಕದ ಹಿನ್ನೆಲೆಯಾಗಿ ಬಳಸುತ್ತೇನೆ.

ಪ್ರಾಚೀನ ಹೆಗ್ಗುರುತುಗಳು ಹಿಂದಿನ ತಲೆಮಾರುಗಳು ಸೂಚಿಸುವ ಗಡಿಗಳಾಗಿವೆ:

- ನಡೆಯಲು ಸುರಕ್ಷಿತ ಪ್ರದೇಶಗಳು ಮತ್ತು ನಡೆದಾಡದಂತೆ ನಿಷೇಧಿಸಲಾದ ಪ್ರದೇಶಗಳು.
- ನಿಷೇಧಿತ ಪ್ರದೇಶಗಳಿಗೆ ನಿಮ್ಮನ್ನು ತೆಗೆದುಕೊಂಡು ಹೋಗುವಂತಹ ಸಾಧ್ಯಕರ ವಂಚನೆ.

ಬದಲಾಗುತ್ತಿರುವ ಪ್ರಪಂಚದಲ್ಲಿ, ನಾವು ನೆನಪಿಟ್ಟುಕೊಳ್ಳಬೇಕು: ನಾವು ಒತ್ತುವರಿ ಮಾಡದಿರುವ ಪೂರ್ವಕಾಲದ ಮೇರೆಗಳಿವೆ. ನಾವು ಹಾದುಹೋಗದಂತಹ ಪವಿತ್ರ ಗಡಿಗಳಿವೆ. ನಾವು ಕಳೆದುಕೊಳ್ಳದಂತಹ ದೈವಿಕ ರೂಢಿ ಸಂಪ್ರದಾಯಗಳಿವೆ.

## ದೈವಿಕ ಸಂಪ್ರದಾಯಗಳನ್ನು ನಾವು ಕಳೆದುಕೊಳ್ಳಬಾರದು

ಮಾನವ ನಿರ್ಮಿತ ಸಂಪ್ರದಾಯಗಳಿವೆ, ಅವು ನಿಷ್ಪ್ರಯೋಜಕವಾಗಿದೆ ಮತ್ತು ಅದನ್ನು ಮುರಿಯಬೇಕು ಎಂಬುದು ನಿಜವಾಗಿದ್ದರೂ ದೈವಿಕವಾದ ಸತ್ಯವೇದದ ಸಂಪ್ರದಾಯಗಳು ಪಾಲಿಸಲ್ಪಡಬೇಕು. ಇವು ಸಮಯ ರಹಿತವಾದವು.

### ಮಾನವ—ನಿರ್ಮಿತ ಸಂಪ್ರದಾಯಗಳು

ದೇವರೊಂದಿಗೆ ನಮ್ಮ ನಡೆಯಲ್ಲಿ ಯಾವುದೇ ಪ್ರಯೋಜನ ತರದಿರುವಂತಹ ಮಾನವ-ನಿರ್ಮಿತ ಸಂಪ್ರದಾಯಗಳನ್ನು ನಾವು ತ್ಯಜಿಸಲು ಸ್ವತಂತ್ರರಾಗಿದ್ದೇವೆ. ಮಾನವ - ನಿರ್ಮಿತ ಸಂಪ್ರದಾಯಗಳು ನಮ್ಮ ಜೀವಿತದಲ್ಲಿ ದೇವರ ವಾಕ್ಯವನ್ನು ಶೂನ್ಯಗೊಳಿಸುತ್ತದೆ. ಮತ್ತು ವಂಚನೆ ಮತ್ತು ಬಂಧನದ ಸ್ಥಳಗಳಿಗೆ ನಮ್ಮನ್ನು ದಾರಿತಪ್ಪಿಸುತ್ತಿದೆ.

**ಮಾರ್ಕ 7:13**
**ಹೀಗೆ ನೀವು ಕಲಿಸುತ್ತಾ ಬಂದಿರುವ ಸಂಪ್ರದಾಯದಿಂದ ದೇವರ ವಾಕ್ಯವನ್ನು ನಿರರ್ಥಕ ಮಾಡುತ್ತೀರಿ. ಮತ್ತು ಇಂಥ ಕಾರ್ಯಗಳನ್ನು ಇನ್ನೂ ಎಷ್ಟೋ ಮಾಡುತ್ತೀರಿ ಎಂದು ಹೇಳಿದನು.**

**ಕೊಲೊಸ್ಸೆಯವರಿಗೆ 2:8**
**ಕ್ರಿಸ್ತನನ್ನು ಅನುಸರಿಸದೆ ಮನುಷ್ಯರ ಸಂಪ್ರದಾಯಗಳನ್ನು ಪ್ರಾಪಂಚಿಕ ಬಾಲ ಬೋಧೆಯನ್ನೂ ಅನುಸರಿಸುವವರು ನಿಮ್ಮಲ್ಲಿ ಬಂದು ಮೋಸವಾದ ನಿರರ್ಥಕ ತತ್ವಜ್ಞಾನ ಬೋಧನೆಯಿಂದ ನಿಮ್ಮ ಮನಸ್ಸನ್ನು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡಾರು, ಎಚ್ಚರಿಕೆಯಾಗಿರ್ರಿ.**

### ದೈವಿಕ ಸಂಪ್ರದಾಯಗಳು

ಹೇಗಾದರೂ, ನಾವು ಉಳಿಸಿಕೊಳ್ಳಬೇಕಾದ ದೈವಿಕ ಸಂಪ್ರದಾಯಗಳಿವೆ ಎಂದು ನಾವು ಅರ್ಥಮಾಡಿಕೊಳ್ಳಬೇಕು.

**1 ಕೊರಿಂಥದವರಿಗೆ 11:2**
**ನೀವು ಎಲ್ಲಾದರಲ್ಲಿಯೂ ನನ್ನನ್ನು ಜ್ಞಾಪಕಮಾಡಿಕೊಂಡು ನಾನು ನಿಮಗೆ ತಿಳಿಸಿಕೊಟ್ಟ ಕಟ್ಟಳೆಗಳನ್ನು ಅನುಸರಿಸಿ ನಡಿಯುತ್ತೀರೆಂದು ನಿಮ್ಮನ್ನು ಹೊಗಳುತ್ತೇನೆ.**

**2 ಥೆಸಲೋನಿಕದವರಿಗೆ 2:15**
**ಹೀಗಿರುವುದರಿಂದ ಸಹೋದರರೇ ದೃಢವಾಗಿ ನಿಲ್ಲಿರಿ ನಾವು ಮಾತಿನಿಂದಾಗಲಿ ಪತ್ರಿಕೆಯಿಂದಾಗಲಿ ನಿಮಗೆ ತಿಳಿಸಿದ ಬೋಧನೆಗಳನ್ನು ನೀವು ಭದ್ರವಾಗಿ ಹಿಡಿದುಕೊಂಡಿರ್ರಿ.**

**2 ಥೆಸಲೋನಿಕದವರಿಗೆ 3:6**
**ಸಹೋದರರೇ ನಮ್ಮಿಂದ ಹೊಂದಿದ ಬೋಧನೆಯನ್ನು ಅನುಸರಿಸದೆ ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಗೆ ನೀವು ದೂರವಾಗಿರಬೇಕೆಂದು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮಗೆ ಆಜ್ಞಾಪಿಸುತ್ತೇವೆ.**

## ಸಂಬಂಧಿತವಾಗಿರುವುದು

ನಾವು ಪಾಲಿಸಬೇಕಾದ ಪ್ರಾಚೀನ ಹೆಗ್ಗುರುತುಗಳಿವೆ, ನಾವು ದಾಟಬಾರದು ಎಂಬ ಪವಿತ್ರ ಗಡಿಗಳಿವೆ. ನಾವು ಕಳೆದು ಕೊಳ್ಳಬಾರದು ಎಂಬ ದೈವಿಕ ಸಂಪ್ರದಾಯಗಳು ಇವೆ ಎಂದು ಅರ್ಥಮಾಡಿಕೊಂಡ ನಾವು ಈಗ ಪ್ರಸ್ತುತತೆ ಎಂಬ ತುಂಬಾ ಆಸಕ್ತಿದಾಯಕ ವಿಷಯಕ್ಕೆ ಬಂದಿದ್ದೇವೆ.

ಬದಲಾಗುತ್ತಿರುವ ಸಂಸ್ಕೃತಿಯಲ್ಲಿ, ಹೊಸ ಪ್ರಪಂಚದಲ್ಲಿ ಮತ್ತು ಪ್ರಾಚೀನ ಹೆಗ್ಗುರುತುಗಳನ್ನು ಪಾಲಿಸುವಲ್ಲಿ ನಾವು ಹೇಗೆ ಅನ್ವಯಿಸಿಕೊಳ್ಳಬಹುದು?

ಕ್ರೈಸ್ತ ವಯಸ್ಕರಂತೆ ನಮ್ಮನ್ನು ನಾವೇ ಗುರ್ತಿಸಿಕೊಳ್ಳುವ ಹೊಸ ಪ್ರಪಂಚದ ಸಂಸ್ಕೃತಿಯೊಡನೆ ಹೋರಾಡುತ್ತೇವೆ. ನಾವು ವಿಭಿನ್ನವಾಗಿ ವಿಶ್ವದ ದೃಷ್ಟಿಕೋನ ಮತ್ತು ಸಂಸ್ಕೃತಿಯನ್ನು ಹೊಂದಿರುವ ಜಗತ್ತಿನಲ್ಲಿ ಬೆಳೆದಿದ್ದೇವೆ ಎಂಬ ಅಂಶಕ್ಕೆ ಹೆಚ್ಚುವರಿಯಾಗಿ ಧರ್ಮಗ್ರಂಥಗಳನ್ನು ಹೇಗೆ ಅನ್ವಯಿಸಬೇಕು ಎಂದು ನಮಗೆ ಈಗ ತಿಳಿದಿಲ್:

ಲೋಕದಲ್ಲಿದ್ದರುಇನ್ನೂ "ಲೋಕದವರಲ್ಲ" (ಯೋಹಾನ 17:14-18) ಎಂಬುದರ ಅರ್ಥವೇನು? ನಾವು ಲೋಕಕ್ಕೆ ಸಂಬಂಧಿತರಾಗಿ ಹೇಗೆ ವಾಸಿಸಬೇಕು ಮತ್ತು ಆದಾಗ್ಯೂ "ಇಹಲೋಕದ ನಡವಳಿಕೆಯನ್ನು ಅನುಸರಿಸದೆ" (ರೋಮಾಪುರದವರಿಗೆ 12:1-2) ಇರುವುದು ಹೇಗೆ? ನಾವು ಪ್ರಪಂಚದೊಡನೆ ಸ್ನೇಹದೊಡನೆ ಸ್ನೇಹವನ್ನು ಹೊಂದದಿದ್ದಾಗಲೂ ಪ್ರಪಂಚದೊಡನೆ ಸಂಪರ್ಕ ಹೇಗೆ ಹೊಂದಬೇಕು? (ಯಾಕೋಬನು 4:4) ನಮ್ಮ ದೈನಂದಿನ ಜೀವನವನ್ನು ನಾವು ಹೇಗೆ ಆನಂದಿಸಬೇಕು. ಮತ್ತು ಪ್ರಪಂಚವನ್ನು ಪ್ರೀತಿಸದಂತೆ ನಮ್ಮನ್ನು ಇನ್ನೂ ಹೇಗೆ ರಕ್ಷಿಸಿಕೊಳ್ಳಬೇಕು. (1ಯೊಹಾನ 2:15-17)? ನಾವು ಹೋರಾಡುತ್ತಿರುವಂತ ಸಮಸ್ಯೆಗಳು ಇವಾಗಿವೆ.

ನಾವು ಲೋಕದ ಹೊರಗಡೆ ಇರಲು ಆಗುವುದಿಲ್ಲ. ಯಾಕೆಂದರೆ ನಾವು ಲೋಕಕ್ಕೆ ಕಳುಹಿಸಲ್ಪಟ್ಟಿದ್ದೇವೆ. ನಮ್ಮನ್ನು ನಾವೇ ಕಂಡುಕೊಳ್ಳುವ ಹೊಸ ಪ್ರಪಂಚದ ಸಂಸ್ಕೃತಿಯೊಡನೆ ನಾವು ಏನು ಮಾಡಬೇಕು? ನಮ್ಮ ಹದಿಹರೆಯದವರು ಮತ್ತು ಮಕ್ಕಳು ಹೊಸ ಪ್ರಪಂಚದಲ್ಲಿ ಬೆಳೆಯುತ್ತಿರುವಾಗ, ಅವರ ಸಂಸ್ಕೃತಿಯು ಬದಲಾಗುತ್ತಿರುವಾಗ ಮತ್ತು ಅವರ ಸಂಸ್ಕೃತಿ ಅಷ್ಟಾಗಿ ನಮಗೆ ಪರಿಚಯವಿಲ್ಲದಿರುವಾಗ ನಾವು ಅವರಿಗೆ ಏನನ್ನು ಕಲಿಸಬಹುದು?

- ಹೊಸ ಪ್ರಪಂಚದ ಸಂಸ್ಕೃತಿಯಿಂದ ನಾವು ಸಂಪರ್ಕಕಡಿತಗೊಳಿಸಿದರೆ ನಾವು ಪ್ರಭಾವ ಬೀರಲು ಅದನ್ನು ಸುಧಾರಿಸಲು ಅಥವಾ ಪರಿವರ್ತಿಸಲು ಶಕ್ತರಾಗುವುದಿಲ್ಲ.
- ಹೊಸ ಪ್ರಪಂಚದ ಸಂಸ್ಕೃತಿಗೆ ನಾವು ಸಂಪೂರ್ಣವಾಗಿ ಹೊಂದಿಕೊಳ್ಳುವವರಾದರೆ ಅದರಲ್ಲಿರುವ ತಪ್ಪಾದದ್ದನ್ನು ಬದಲಾಯಿಸಲು ನಾವು ಶಕ್ತರಾಗುವುದಿಲ್ಲ.
- ಸಮಯ ರಹಿತ ಸತ್ಯಗಳು ಮತ್ತು ತತ್ವಗಳನ್ನು ಸ್ಥಾಪಿಸಲು ಮತ್ತು ವಿವರಿಸಲು ಹೊಸ ಪ್ರಪಂಚದ ಸಂಸ್ಕೃತಿಯನ್ನು ನಾವು ಬಳಸಿಕೊಳ್ಳಬೇಕು, ಅರ್ಥಮಾಡಿಕೊಳ್ಳಬೇಕು ಮತ್ತು ಅನ್ವೇಷಿಸಬೇಕು.

ಯಾವುದೇ ಸಂಸ್ಕೃತಿ ಸ್ವತಃ ಒಳ್ಳೆಯದಲ್ಲ ಅಥವಾ ಕೆಟ್ಟದ್ದಲ್ಲ ಬದಲಿಗೆ ಪ್ರತಿಯೊಂದು ಸಂಸ್ಕೃತಿಯು ಒಳ್ಳೆಯ ಮತ್ತು ಕೆಟ್ಟ ಅಂಶಗಳನ್ನು ಒಳಗೊಂಡಿರುತ್ತದೆ. ಅದನ್ನು ಗ್ರಹಿಸಬೇಕು ಮತ್ತು ಬುದ್ಧಿವಂತಿಕೆಯಿಂದ ವ್ಯವಹರಿಸಬೇಕು. ಪೌಲನು ದೇವರ ಹೃದಯವನ್ನು ಸಂಪರ್ಕ ಮಾಡುವಾಗ ಅವನು ಹೇಳಿದ್ದು ಇಲ್ಲಿದೆ:

**1 ಕೊರಿಂಥದವರಿಗೆ 9:19-23**
**19 ನಾನು ಎಲ್ಲಾ ವಿಷಯದಲ್ಲಿ ಸ್ವತಂತ್ರನಾಗಿದ್ದರೂ ಹೆಚ್ಚು ಜನರನ್ನು ಸಂಪಾದಿಸಿಕೊಳ್ಳಬೇಕೆಂದು ನನ್ನನ್ನು ಎಲ್ಲರಿಗೂ ಅಧೀನಮಾಡಿದೆನು.**
**20 ಯೆಹೂದ್ಯರನ್ನು ಸಂಪಾದಿಸಿಕೊಳ್ಳುವದಕ್ಕೆ ಯೆಹೂದ್ಯರಿಗೆ ಯೆಹೂದ್ಯನಂತಾದೆನು. ನಾನು ನಿಯಮಗಳಿಗೆ ಅಧೀನನಲ್ಲದವನಾದರೂ ನಿಯಮಗಳಿಗೆ ಅಧೀನರಾದವರನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಅವರಿಗೆ ನಿಯಮಗಳಿಗೆ ಅಧೀನನಂತಾದೆನು.**
**21 ನಾನು ದೇವರ ನೇಮವಿಲ್ಲದವನಲ್ಲ, ಕ್ರಿಸ್ತ ನಿಯಮಕ್ಕೊಳಗಾದವನೇ; ಆದರೂ ನಿಯಮವಿಲ್ಲದವರನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಅವರಿಗೆ ನಿಯಮವಿಲ್ಲದವನಂತಾದೆನು.**
**22 ಬಲವಿಲ್ಲದವರನ್ನು ಸಂಪಾದಿಸುವದಕ್ಕೆ ಅವರಿಗೆ ಬಲವಿಲ್ಲದವನಾದೆನು. ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರಾರಿಗೆ ಎಂಥೆಂಥವನಾಗಬೇಕೋ ಅಂಥಂಥವನಾಗಿದ್ದೇನೆ.**
**23 ನಾನು ಇತರರ ಸಂಗಡ ಸುವಾರ್ತೆಯ ಫಲದಲ್ಲಿ ಪಾಲುಗಾರನಾಗಬೇಕೆಂದು ಇದೆಲ್ಲವನ್ನು ಸುವಾರ್ತೆಗೋಸ್ಕರವೇ ಮಾಡುತ್ತೇನೆ.**

1 ಕೊರಿಂಥದವರಿಗೆ 9 ರಿಂದ ಉಲ್ಲೇಖಿಸಲಾದ ಧರ್ಮಗ್ರಂಥಗಳು ಬಹುಶಃ ನಮ್ಮ ಪ್ರೇಕ್ಷಕರಿಗೆ ಪ್ರಸ್ತುತವಾಗುವುದರ ಬಗ್ಗೆ ಮತ್ತು ಎಲ್ಲಾ ಪುರುಷರಿಗೆ ಎಲ್ಲ ವಿಷಯಗಳಾಗುವುದರ ಬಗ್ಗೆ ನಮಗೆ ಕಲಿಸುವ ಪ್ರಮುಖ ಭಾಗಗಳಾಗಿವೆ. ನಾವು ಸೇವೆ ಮಾಡುತ್ತಿರುವವರಂತೆ ಆಗುವುದು. ಪೌಲನು ತನ್ನ ಕಾಲದಲ್ಲಿ ಅದು ಅಗತ್ಯವೆಂದು ಕಂಡುಕೊಂಡರೆ, ನಾವೂ ಸಹ ಹಾಗೆ ಮಾಡಬೇಕು ಎಂದು ನನಗೆ ಖಾತ್ರಿಯಿದೆ!

**1 ಕೊರಿಂಥದವರಿಗೆ 10: 32-33**
**32 ಯೆಹೂದ್ಯರಿಗಾಗಲಿ ಗ್ರೀಕರಿಗಾಗಲಿ ದೇವರ ಸಭೆಗಾಗಲಿ ವಿಘ್ನವಾಗಬೇಡಿರಿ.**
**33 ನಾನಂತೂ ಸ್ವ ಪ್ರಯೋಜನಕ್ಕಾಗಿ ಚಿಂತಿಸದೆ ಮನುಷ್ಯರೆಲ್ಲರೂ ರಕ್ಷಣೆ ಹೊಂದಬೇಕೆಂದು ಅವರ ಪ್ರಯೋಜನಕ್ಕಾಗಿ ಚಿಂತಿಸಿ ಎಲ್ಲರನ್ನೂ ಎಲ್ಲಾ ವಿಷಯಗಳಲ್ಲಿ ಮೆಚ್ಚಿಸುವವನಾಗಿದ್ದೇನೆ.**

1 ಕೊರಿಂಥದವರಿಗೆ 10:32-33 ಅಪೊಸ್ತಲನಾದ ಪೌಲನು ಹಿಂದೆ ಚರ್ಚಿಸುತ್ತಿದ್ದಂತ 1 ಕೊರಿಂಥದವರಿಗೆ 9:19-23ರ ಬೆಳಕಿನಲ್ಲಿ ಅರ್ಥಮಾಡಿಕೊಳ್ಳಬೇಕು. ಎಲ್ಲಾ ವಿಷಯಗಳಲ್ಲಿ ಎಲ್ಲಾ ಮನುಷ್ಯರನ್ನು ಮೆಚ್ಚಿಸುವುದು ಇಲ್ಲವೆ ತನ್ನೆಡೆಗೆ ಜನರನ್ನು ಸೆಳೆಯುವುದು ಪೌಲನು ಕಾರಣವಲ್ಲ. ಆದರೆ ಅವರನ್ನು ಕ್ರಿಸ್ತನ ನಂಬಿಕೆಯಲ್ಲಿ ನಡೆಸುವುದಾಗಿದೆ.

"ಪ್ರಸ್ತುತತೆಯು ಯಾವುದು ಸಮಯ ರಹಿತವಾದದ್ದೆಂದು ಹೇಳಲು ಸಾಂಸ್ಕೃತಿಕವಾದುದ್ದನ್ನು ಉಪಯೋಗಿಸುತ್ತದೆ. ಸಮಯ ರಹಿತವಾದುದ್ದನ್ನು ಹೇಳಲು ನಾವು ಸಾಂಸ್ಕೃತಿಕವಾದದ್ದನ್ನು ಉಪಯೋಗಿಸುತ್ತಿದೆ. ಸಮಯ ರಹಿತವಾದುದ್ದನ್ನು ಹೇಳಲು ನಾವು ಸಾಂಸ್ಕೃತಿವಾದದ್ದನ್ನು ಉಪಯೋಗಿಸಬೇಕು" (ರೆಗ್ಗೀ ಜಾಯ್ನರ್, ಫ್ಯಾಮಿಲಿವೈಸ್ ಸ್ಥಾಪಕ).

ಪ್ರಪಂಚವು ಬದಲಾಗುತ್ತಿದೆ. ನಿನ್ನೆ ಕೆಲಸ ಮಾಡಿದ್ದು ಇಂದು ಕೆಲಸ ಮಾಡದಿರಬಹುದು! ಹೊಸ ಪ್ರಪಂಚವನ್ನು ನಾವು ಅಳವಡಿಸಿಕೊಳ್ಳಬೇಕು. ಹೊಸ ಪ್ರಪಂಚದ ಹೊಸ ಸಂಸ್ಕೃತಿಯ ಭಾಗವಾಗಿರುವ ಚಿಹ್ನೆಗಳು ಮತ್ತು ಭಾಷೆಯನ್ನು ಬಳಸಿಕೊಂಡು ನಾವು ನಿತ್ಯವಾದ ಸತ್ಯಗಳನ್ನು ಪ್ರಸ್ತುತ ಪಡಿಸುವುದು ಅವಶ್ಯವಾಗಿದೆ. ಇನ್ನೂ ಹಾಗೆ

ಮಾಡುವುದರಿಂದ ಅಪಾಯಗಳಿವೆ ಎಂದು ನಾವು ತಿಳಿದಿರಬೇಕು. ನಾವು ಸಂಸ್ಕೃತಿಯಿಂದ ವಿಷಯಗಳನ್ನು ಗೊತ್ತು ಗುರಿಯಿಲ್ಲದೆ ತೆಗೆದುಕೊಳ್ಳಲು ಸಾಧ್ಯವಿಲ್ಲ ಮತ್ತು ಸಮಯ ರಹಿತ ಸತ್ಯಗಳನ್ನು ಸಂಪರ್ಕ ಮಾಡಲು ಅವುಗಳನ್ನು ಉಪಯೋಗಿಸಲಾಗುವುದಿಲ್ಲ. ಹೊಸ ಪ್ರಪಂಚದ ಸಂಸ್ಕೃತಿಯನ್ನು ಬಳಸಿಕೊಳ್ಳಲು, ತೊಡಗಿಸಿಕೊಳ್ಳಲು ಮತ್ತು ಉಪಯೋಗಿಸುವ ನಮ್ಮ ಪ್ರಯತ್ನದಲ್ಲಿ ಪ್ರಾಚೀನ ಹೆಗ್ಗುರುತುಗಳ ಮೇಲೆ ನಾವು ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ.

ನಾವು ನೆನಪಿನಲ್ಲಿಟ್ಟುಕೊಳ್ಳಬೇಕು: ನಾವು ಚಲಿಸದ ಪ್ರಾಚೀನ ಹೆಗ್ಗುರುತುಗಳಿವೆ. ನಾವು ದಾಟಬಾರದು ಎಂಬ ಗಡಿಗಳಿವೆ. ನಾವು ಕಳೆದು ಕೊಳ್ಳಬಾರದ ದೈವಿಕ ಸಂಪ್ರದಾಯಗಳಿವೆ.

## 4. ನಮ್ಮ ಪ್ರಾಚೀನ ಹೆಗ್ಗುರುತುಗಳು

ಜೀವನದ ಹಲವಾರು ಪ್ರಮುಖ ಕ್ಷೇತ್ರಗಳಲ್ಲಿ ಬೀಸುತ್ತಿರುವ ಬದಲಾವಣೆಯ ಕೆಲವು ಗಾಳಿಗಳನ್ನು ನಾನು ಸಂಬೋಧಿಸಲು ಬಯಸುತ್ತೇನೆ. ಮತ್ತು ಈ ಕ್ಷೇತ್ರಗಳಲ್ಲಿನ ನಮ್ಮ ಪ್ರಾಚೀನ ಹೆಗ್ಗುರುತುಗಳನ್ನು ನಿಮಗೆ ನೆನಪಿಸುತ್ತೇನೆ:

- ವೈಯಕ್ತಿಕ ಜೀವಿತ ಮತ್ತು ನಡವಳಿಕೆ
- ಮದುವೆ ಮತ್ತು ಕುಟುಂಬ
- ಕೆಲಸದ ಸ್ಥಳ
- ಸಭಾ ಜೀವಿತ ಮತ್ತು
- ಸೇವೆ

ಪ್ರಸ್ತುತ ಹೊಸ ಪ್ರಪಂಚದಿಂದ ಸಂಪರ್ಕ ಕಡಿತಗೊಳ್ಳದಂತೆ ಮತ್ತು ನಾವು ಹಿಂದೆ ಉಳಿಯದಂತೆ, ನಮ್ಮ ಹಡಗುಗಳನ್ನು ಹೊಂದಿಸಿಕೊಂಡು ಮತ್ತು ಅಳವಡಿಸಿಕೊಂಡ ಗಾಳಿ ಬೀಸುತ್ತಿರುವ ಸ್ಥಳಕ್ಕೆ ಹೋಗಲು ಕೆಲವು ಗಾಳಿಗಳು ಬೀಸುತ್ತಿವೆ. ಮತ್ತು ಆಮೇಲೆ ಬದಲಾವಣೆಯ ಕೆಲವು ಗಾಳಿಗಳು ಒಂದು ದಿಕ್ಕಿನಲ್ಲಿ ಬೀಸುತ್ತಿವೆ. ಅದು ನಮಗೆ ಪವಿತ್ರ ಗಡಿಗಳನ್ನು ದಾಟಲು ಮತ್ತು ದೈವಿಕ ಸಂಪ್ರದಾಯಗಳನ್ನು ಕಳೆದುಕೊಳ್ಳದಂತೆ ಮಾಡುತ್ತದೆ. ಬದಲಾವಣೆಯ ಈ ಗಾಳಿಗಳ ಮೂಲಕ, ಬಿರುಗಾಳಿಗಳ ಮೂಲಕ ನಮಗೆ ಲಂಗರು ಹಾಕುವ ಪ್ರಾಚೀನ ಹೆಗ್ಗುರುತುಗಳನ್ನು ಉಪಯೋಗಿಸಿಕೊಂಡು ಹಡಗು ಓಡಿಸುವುದನ್ನು (ಸಂಚರಿಸುವುದನ್ನು) ನಾವು ಕಲಿಯಬೇಕು.

ಬದಲಾವಣೆಯ ಎಲ್ಲಾ ಕ್ಷೇತ್ರಗಳನ್ನು ಮತ್ತು ಜೀವಿತದ ಎಲ್ಲಾ ಕ್ಷೇತ್ರಗಳನ್ನು ಈ ಪುಸ್ತಕದಲ್ಲಿ ಸಂಬೋಧಿಸುವುದು ನನ್ನ ಉದ್ದೇಶವಲ್ಲ. ಸಾಕಷ್ಟು ಬುದ್ಧಿವಂತಿಕೆ ಮತ್ತು ತಿಳುವಳಿಕೆಯನ್ನು ರವಾನಿಸುವುದು ನನ್ನ ಉದ್ದೇಶವಾಗಿದೆ. ಆದ್ದರಿಂದ ಮುಂದಿನ ವರ್ಷಗಳಲ್ಲಿ ನಮ್ಮ ಮೇಲೆ ಬರಲಿರುವ ಅಥವಾ ಬೀಸುತ್ತಿರುವ ಬದಲಾವಣೆಯ ಗಾಳಿಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ನಾವು ತಿಳಿಯುತ್ತೇವೆ. ನಾವು ಪ್ರಾಚೀನ ಹೆಗ್ಗುರುತುಗಳೊಳಗೆ ಪವಿತ್ರ ಮೇರೆಗಳನ್ನು ದಾಟದಂತೆ ಮತ್ತು ದೈವಿಕ ಸಂಪ್ರದಾಯಗಳನ್ನು ಕಳೆದುಕೊಳ್ಳದಂತೆ ಉಳಿಯಲು ಸಮರ್ಥರಾಗಿರೋಣ.

ನಾವುಗಳು ಬದಲಾವಣೆಗೆ ಸರಿಯಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಹೊಂದಿರಬೇಕೆಂಬುದಾಗಿ ನಾನು ಅಪೇಕ್ಷಿಸುವುದಲ್ಲದೆ ಆದರೆ ನಮ್ಮ ಪ್ರಪಂಚಕ್ಕೆ ಈ ಪ್ರಾಚೀನ ಹೆಗ್ಗುರುತುಗಳನ್ನು ಕೊಂಡೊಯ್ಯಬೇಕೆಂಬುದಾಗಿ ನಿಮಗೆ ನಾನು ಸವಾಲು ನೀಡಲು ಆಶಿಸುತ್ತೇನೆ. ಆದ್ದರಿಂದ ಬದಲಾವಣೆಯ ಗಾಳಿಯ ನಿಮಿತ್ತದಿಂದ ವಿಭಜನೆಗೊಂಡಿರುವ ನಮ್ಮ ಪ್ರಪಂಚದ ಅಂತಹ ಕ್ಷೇತ್ರಗಳನ್ನು ನಾವು ಬದಲಾಯಿಸಬಹುದು. ಜನರುಗಳು ಪ್ರಾಚೀನ ಹೆಗ್ಗುರುತುಗಳಿಂದ, ಪವಿತ್ರ ಮೇರೆಗಳು ಮತ್ತು ವ್ಯಾಪಾರ, ಸರ್ಕಾರ, ವಿದ್ಯಾಭ್ಯಾಸ, ಕ್ರೀಡೆ, ಮಾಧ್ಯಮ, ಮನರಂಜನೆ, ಸೌಂದರ್ಯಶೈಲಿ ಮತ್ತು ಎಲ್ಲೆಡೆ ದೈವಿಕ ಸಂಪ್ರದಾಯದ ಕ್ಷೇತ್ರದಲ್ಲಿ ಜೀವಿಸುತ್ತಿರುವುದನ್ನು ಕಲ್ಪಿಸಿಕೊಳ್ಳಿರಿ. ನಾವು ನಿಜವಾಗಿಯೂ ನಮ್ಮ ಪ್ರಪಂಚದಲ್ಲಿ ಉಪ್ಪು ಮತ್ತು ಬೆಳಕಾಗಿರುತ್ತೇವೆ!

ಇಲ್ಲಿ ನನ್ನ ಕರೆಯು ಸರಳವಾಗಿದೆ: ಸತ್ಯ ವೇದದೊಡನೆ ಇರ್ರಿ. ಸತ್ಯವೇದವು ನಮ್ಮ ಪ್ರಾಚೀನ ಹೆಗ್ಗುರುತು!

# ವೈಯಕ್ತಿಕ ಜೀವಿತ ಮತ್ತು ಗುಣನಡತೆಗಾಗಿ ಪ್ರಾಚೀನ ಹೆಗ್ಗುರುತುಗಳು

## ಪರಿಶುದ್ಧತೆ

**1 ಪೇತ್ರನು 1:14-16**
**14 ನೀವು ಮುಂಚೆ ಅಜ್ಞಾನಿಗಳಾಗಿದ್ದಾಗ ನಿಮಗಿದ್ದ ದುರಾಶೆಗಳನ್ನು ಅನುಸರಿಸಿ**
**15 ನಡೆಯುವವರಾಗಿರದೆ ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರ್ರಿ.**
**16 ನಾನು ಪರಿಶುದ್ಧನಾಗಿರುವುದರಿಂದ ನೀವೂ ಪರಿಶುದ್ಧರಾಗಿರಬೇಕು ಎಂದು ಬರೆದದೆಯಲ್ಲಾ.**

**ಇಬ್ರಿಯರಿಗೆ 12:14**
**ಎಲ್ಲರ ಸಂಗಡ ಸಮಾಧಾನದಿಂದಿರುವುದಕ್ಕೂ ಪರಿಶುದ್ಧತೆಯನ್ನು ಹೊಂದುವುದಕ್ಕೂ ಪ್ರಯತ್ನ ಮಾಡಿರಿ ಪರಿಶುದ್ಧತೆಯುಉಲ್ಲದೆ ಯಾವನೂ ಕರ್ತನನ್ನು ಕಾಣುವುದಿಲ್ಲ.**

ಪರಿಶುದ್ಧರಾಗಿರುವುದೆಂದರೆ "ದೇವರಿಗಾಗಿ ಪ್ರತ್ಯೇಕಿಸಲ್ಪಟ್ಟವರಾಗಿರುವುದು." ನಾನು ದೇವರಿಗೆ ಸಂಬಂಧಪಟ್ಟವನೆಂದು ಇದರ ಅರ್ಥವಾಗಿದೆ. ಆದ್ದರಿಂದ ನಾನು ಹೇಳುವಂತದೆಲ್ಲವೂ ಮತ್ತು ಮಾಡುವಂತದೆಲ್ಲವೂ ದೇವರನ್ನು ಪ್ರತಿನಿಧಿಸಬೇಕು, ದೈವೀಕರಾಗಿರಬೇಕು ಮತ್ತು ದೈವಿಕತೆಯನ್ನು ಪ್ರದರ್ಶಿಸಬೇಕು.

ನಾವು ಹೇಳುವ, ಮಾಡುವ, ಧರಿಸುವ ಇನ್ನೂ ಮುಂತಾದ ವಿಷಯಗಳನ್ನು ಇದರ ಗುಣಮಟ್ಟದಿಂದ ನಾವು ನ್ಯಾಯತೀರ್ಪು ಮಾಡಬೇಕು. ಆದಾಗ್ಯೂ ಪರಿಶುದ್ಧತೆಯ ನಮ್ಮ ಗುಣಮಟ್ಟಗಳು ಅದೇರೀತಿಯ ಗುಣಮಟ್ಟ ಹೊಂದಿರದ ಜನರಿಂದ ನಮ್ಮನ್ನು ಪ್ರತ್ಯೇಕವಾಗಿಡಲು ಅಲ್ಲ. ಅವರಿಂದ ನಾವು ಪ್ರಭಾವಿತರಾಗದಂತೆ ಅವರೊಂದಿಗೆ ಸಂಬಂಧಿಸಿಕೊಳ್ಳುವುದು ನಮಗೆ ಅವಶ್ಯಕವಾಗಿದೆ.

ಯೇಸುವು "ಸುಂಕದವರು ಮತ್ತು ಪಾಪಿಗಳೊಡನೆ" ಕುಳಿತುಕೊಳ್ಳುವುದು ಮತ್ತು ಊಟ ಮಾಡುವುದರಲ್ಲಿ ತುಂಬಾ ಆರಾಮದಾಯಕನಾಗಿದ್ದನು ಎಂಬುದನ್ನು ನೆನಪಿಸಿಕೊಳ್ಳಿರಿ (ಮತ್ತಾಯ 9:11) ಇದರ ಅರ್ಥವು ಅವರು ಧರಿಸುವುದನ್ನು ಸ್ವಲ್ಪ ಮಟ್ಟಿಗೆ ನಾನು ಧರಿಸಬಹುದು, ಅವರಂತೆಯೇ ವಾಸನೆ, ಅವರಂತೆಯೇ ನೋಡಬಹುದು ಮತ್ತು ಆದಾಗ್ಯೂ ದೇವರ ಮುಂದೆ ವೈಯಕ್ತಿಕ ಪರಿಶುದ್ಧತೆಯ ಗುಣಮಟ್ಟಗಳನ್ನು ಕಳೆದುಕೊಳ್ಳಬಾರದು.

ಪ್ರಪಂಚದ ಯಾವುದೇ ಭಾಗದಲ್ಲಿ ಜೀವಿಸುತ್ತೇವೆ ಎಂಬುದನ್ನು ಲೆಕ್ಕಿಸದೇ ಮತ್ತು ನಾವು ಯಾವ ಸಂಸ್ಕೃತಿಗೆ ಬದ್ಧರಾಗಿದ್ದೇವೆ ಎಂಬುದನ್ನು ಲೆಕ್ಕಿಸದೇ ಪರಿಶುದ್ಧತೆಯು ಪ್ರಾಚೀನ ಹೆಗ್ಗುರುತಾಗಿದೆ.

ಪರಿಶುದ್ಧತೆಗಾಗಿ ದೇವರ ಗುಣಮಟ್ಟಗಳು ನಿಶ್ಚಿತವಾಗಿವೆ. ನಾವು ಪ್ರಪಂಚದ ಯಾವುದೇ ಭಾಗದಲ್ಲಿ ವಾಸಿಸಬಹುದು ಮತ್ತು ನಾವು ಕಾರ್ಯ ನಡೆಸುತ್ತಿರುವ ಯಾವುದೇ ಸಂಸ್ಕೃತಿಯನ್ನು ಲೆಕ್ಕಿಸದೇ ಆತನ ಮಕ್ಕಳುಗಳಿಗೆಲ್ಲಾ ಅದೇ ರೀತಿಯಲ್ಲಿವೆ. ವಿಶ್ವಾಸಿಗಳಾಗಿ ನಮ್ಮ ನೈತಿಕ ಗುಣಮಟ್ಟಗಳನ್ನು ವ್ಯಾಖ್ಯಾನಿಸಲು ಆಗುವುದಿಲ್ಲ. ಅವು ನಮಗೆ ದೇವರ ವಾಕ್ಯದಲ್ಲಿ ವ್ಯಾಖ್ಯಾನಿಸಲ್ಪಟ್ಟಿವೆ. ಸಂಸ್ಕೃತಿಯಿಂದ ಸಂಸ್ಕೃತಿಗೆ ಪರಿಶುದ್ಧತೆಯ ಗುಣಮಟ್ಟವು ವ್ಯತ್ಯಾಸಕರವಾಗಿರುತ್ತದೆ, ಮತ್ತು ನಮ್ಮ ಸ್ವಂತ ನೈತಿಕ ಗುಣಮಟ್ಟಗಳನ್ನು ವ್ಯಾಕ್ಯಾನಿಸುತ್ತೇವೆಂದು ಕೆಲವರು ಬೋಧಿಸುವ ಮತ್ತು ಪ್ರಸಂಗಿಸುವ ನಿರ್ದಿಷ್ಟ ಸ್ಥಳಕ್ಕೆ ಸಭೆಯೊಳಗೆ ಒಳ ನುಸುಳಿದ ನೈತಿಕ ಸಾಪೇಕ್ಷತಾವಾದದ ನಂತರದ ಆಧುನಿಕ ತತ್ವಶಾಸ್ತ್ರದಿಂದ ನಾವು ಬಹಳ ಎಚ್ಚರದಿಂದಿರಬೇಕು. ಇದು ಸಾಧ್ಯವಿಲ್ಲ! ಪ್ರಪಂಚದ

ಯಾವುದೇ ಭಾಗದಲ್ಲಿ ಸತ್ಯವೇದವು ಒಂದೇ ರೀತಿ ಓದಲ್ಪಡುತ್ತದೆ ಮತ್ತು ದೇವರು ತನ್ನ ಎಲ್ಲಾ ಮಕ್ಕಳಿಗೂ ಒಂದೇ ವಿಷಯವನ್ನು ಹೇಳುತ್ತಾನೆ!

ಸ್ತ್ರೀಯರೇ, ನೀವು ಬಟ್ಟೆ ಧರಿಸುವಾಗ ಎರಡು ಪ್ರಮುಖ ಸಂಗತಿಗಳಾದ - ನಮ್ರತೆ ಮತ್ತು ದೈವಭಕ್ತಿ ಪ್ರದರ್ಶಿಸಬೇಕೆಂಬುದನ್ನು ವಿಶಿಷ್ಟವಾಗಿ ದಯವಿಟ್ಟು ನೆನಪಿಸಿಕೊಳ್ಳಿರಿ.

**1 ತಿಮೊಥೆಯನಿಗೆ 2:9-10**
**9 ಹಾಗೆಯೇ ಸ್ತ್ರೀಯರು ಮಾನಸ್ಥೆಯರಾಗಿಯೂ ಡಂಭವಿಲ್ಲದವರಾಗಿಯೂ ಇದ್ದು ಮರ್ಯಾದೆಗೆ ತಕ್ಕ ಉಡುಪನ್ನುಟ್ಟು ಕೊಳ್ಳಬೇಕೆಂದು ಅಪೇಕ್ಷಿಸುತ್ತಾನೆ. ಅವರು ಜಡೆ ಚಿನ್ನ ಮುತ್ತು ಬೆಲೆಯುಳ್ಳ ವಸ್ತ್ರ ಮುಂತಾದವುಗಳಿಂದ ತಮ್ಮನ್ನು ಅಲಂಕರಿಸಿಕೊಳ್ಳದೆ**
**10 (ದೇವ ಭಕ್ತಿಯರೆನಿಸಿಕೊಳ್ಳುವ ಸ್ತ್ರೀಯರಿಗೆ ಯುಕ್ತವಾಗಿರುವ ಪ್ರಕಾರ) ಸತ್ಕ್ರಿಯೆಗಳಿಂದಲೇ ಅಲಂಕರಿಸಿಕೊಳ್ಳಬೇಕು.**

ನಮ್ರತೆಯಿಂದ ಬಟ್ಟೆಧರಿಸುವುದನ್ನು ವಿಭಿನ್ನ ಸಂಸ್ಕೃತಿಗಳಲ್ಲಿ ವಿಭಿನ್ನವಾಗಿ ವಾನಾಖ್ಯಾನಿಸಲ್ಪಟ್ಟಿದೆ ಎಂಬುದಾಗಿ ಕೆಲವರು ವಾದಿಸಬಹುದು ಎಂಬುದಾಗಿ ನಾನು ತಿಳಿದಿದ್ದೇನೆ. ಒಂದು ಸಂಸ್ಕೃತಿಯಲಿ ಅಸಭ್ಯವೆಂಬುದಾಗಿ ಪರಿಗಣಿಸಲ್ಪಟ್ಟಿರುವುದು ಇನ್ನೊಂದು ಸಂಸ್ಕೃತಿಯಲ್ಲಿ ಪರಿಪೂರ್ಣವಾಗಿ ಸರಿಯಾದುದಾಗಿರಬಹುದೆಂದು ಅವರು ಹೇಳಬಹುದು. ನನ್ನ ಪ್ರತಿಕ್ರಿಯೆ ದ್ವಿಮುಕವಾಗಿರುತ್ತದೆ: ಮೊದಲನೆಯದಾಗಿ, ಧರ್ಮಗ್ರಂಥವು ಸ್ತ್ರೀಯರು ಸುಂದರಗೊಳಿಸುವ ಮತ್ತು ಪ್ರದರ್ಶಿಸುವುದಕ್ಕೆ ಹೀಗೆ ಕರೆ ನೀಡುತ್ತದೆ “ಹೃದಯದ ಗುಪ್ತ ವ್ಯಕ್ತಿ” ಇದು ದೇವರ ದೃಷ್ಟಿಯಲ್ಲಿ ತುಂಬಾ ಅಮೂಲ್ಯವಾದದ್ದು (1 ಪೇತ್ರನು 3:4) ಆದ್ದರಿಂದ ಸಂಸ್ಕೃತದಲ್ಲಿ ಲೆಕ್ಕಿಸದೆ, ಒಬ್ಬ ನಂಬಿಕೆಯುಳ್ಳ ಸ್ತ್ರೀಯ ದೃಷ್ಟಿಯು ಇದಾಗಿರಬೇಕು. ಎರಡನೆಯದಾಗಿ., ನೀವು ವಾಸಿಸುತ್ತಿರುವ ಸಂಸ್ಕೃತಿಯ ಸನ್ನಿವೇಶದೊಳಗೆ ನಮ್ರತೆಯುಳ್ಳವರಾಗಿರಿ.

## ಪ್ರಾಮಾಣಿಕತೆ

**ಜ್ಞಾನೋಕ್ತಿಗಳು 10:9**
**ನಿರ್ದೋಷದ ನಡತೆಯವನು ನಿರ್ಭಯವಾಗಿ ನಡೆಯುವನು ವಕ್ರಮಾರ್ಗಿಯು ಬೈಲಿಗೆ ಬೀಳುವನು.**

ನಮ್ಮ ಜೀವಿತದ ಯಾವುದೇ ಕ್ಷೇತ್ರದಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠಾವಂತಿಕೆ ಮೇಲೆ ರಾಜಿ ಮಾಡಿಕೊಳ್ಳಲಾಗುವುದಿಲ್ಲ. ಸಂದರ್ಭಗಳು ಎಷ್ಟೆ ಬೇಡಿಕೆಯಿಟ್ಟರು ಅದನ್ನು ಲೆಕ್ಕಿಸದೇ-ನಾವು ಚಲಿಸದೆ ಇರುವಂತಹ ಗಡಿಯು ಇದಾಗಿದೆ.

## ಪರಿಶ್ರಮದ ಕೆಲಸ

**ಜ್ಞಾನೋಕ್ತಿಗಳು 10:4**
**ಜೋಲು ಗೈ ದಾರಿದ್ರ್ಯ ಚುರುಕು ಗೈ ಐಶ್ವರ್ಯ.**

ಜನರು ಹೊಂದಿರುವ ತ್ವರಿತ ಯಶಸ್ಸಿನಿಂದ ನಾವು ಕೆಲವೊಮ್ಮೆ ಆಕರ್ಷಿತರಾಗುತ್ತೇವೆ.
ಎರಡನೆಯ, ವೆಬ್ ಬೂಮ್‌ನ ನಕ್ಷತ್ರ ಎಂಬುದಾಗಿ ಕರೆಯಲ್ಪಡುವ ಫೇಸಬುಕ್ ಡಾಟ್ ಕಾಮ್‌ನ ಸಂಸ್ಥಾಪಕ 23 ವರ್ಷದ ಹಾರ್ವರ್ಡ್ ಡ್ರಾಪ್ ಔಟ್ ಜುಕರ್ ಬರ್ಗ್, ಈ ಪುಸ್ತಕವನ್ನು ಬರೆಯುವ ಸಮಯದಲ್ಲಿ 15 ಮಿಲಿಯನ್ ಮತ್ತು ಅದಕ್ಕಿಂತ ಹೆಚ್ಚಿನ ಆಸ್ತಿ ಮೌಲ್ಯವನ್ನು ಹೊಂದಿದ್ದರು. ಒಂದು ಉತ್ತಮ ವಿಚಾರದೊಡನೆ ಮತ್ತು ಸುಮಾರು 4 ವರ್ಷಗಳಲ್ಲಿ ಅವನು ಬಹುತೇಕ ತ್ವರಿತ ಯಶಸ್ಸನ್ನು ಅನುಭವಿಸಿದ್ದಾನೆ.

ತ್ವರಿತ ಯಶಸ್ಸಿನ ಕಥೆಗಳನ್ನು ಕೇಳುವುದು ಮತ್ತು ನೋಡುವುದು ಕೆಲವೊಮ್ಮೆ ನಾವು ಸುಲಭವಾದ ಮಾರ್ಗವನ್ನು ಹುಡುಕುವ ಸ್ಥಾನಕ್ಕೆ ನಮ್ಮನ್ನು ತಳ್ಳುತ್ತದೆ. ಪರಿಶ್ರಮದ ಕೆಲವು ಯಾವುದೇ ಹೆಚ್ಚು ಅನ್ವಯದಂತೆ ಕಾಣುತ್ತಿಲ್ಲ. ಆದರೆ "ಪ್ರಾಚೀನ ಹೆಗ್ಗುರುತು" ಹೇಳತ್ತದೆ ಜೋಲುಗೈಯನ್ನು ಹೊಂದಿದ್ದರೆ ಬಡವರಾಗಿ ಕಂಡುಬರುತ್ತೇವೆಂದು ಹೇಳುತ್ತದೆ. ಪರಿಶ್ರಮವು ಯಶಸ್ಸನ್ನು ನೋಡುತ್ತದೆ.

ವಿಪ್ರೋದ ಅಧ್ಯಕ್ಷ ಅಜೀಮ್ ಪ್ರೇಮ್‌ಜಿ ವಾರದಲ್ಲಿ ಸರಾಸರಿ 80 ಗಂಟೆಗಳ ಕಾಲ ಕೆಲಸ ಮಾಡುತ್ತಾರೆ ಎಂದು ಹೇಳಲಾಗಿದೆ ಎಂದು ನಿಮಗೆ ತಿಳಿದಿದೆಯೇ? ಯಾರನ್ನಾದರೊಬ್ಬರನ್ನು ಅವರ ತಂಡದ ಭಾಗವಾಗಿ ಪರಿಗಣಿಸುವಾಗ "ವಾರದಲ್ಲಿ ಎಷ್ಟು ಗಂಟೆಗಳು ಕೆಲಸವನ್ನು ನೀವು ಮಾಡುತ್ತೀರಿ"? ಎಂಬುದಾಗಿರುವುದು ಅವರ ಒಂದು ಪ್ರಶ್ನೆಯಾಗಿರುತ್ತದೆ. ಯಾರಾದರೂ ಅಧ್ಯಕ್ಷರೊಂದಿಗೆ ನೇರವಾಗಿ ಕೆಲಸ ಮಾಡಲು ಬಯಸಿದರೆ ಒಂದು ವಾರಕ್ಕೆ 60-70 ಗಂಟೆಗಳು ಕೆಲಸ ಮಾಡಲು ಸಿದ್ಧರಿರಬೇಕು. ನಮ್ಮ ಕೆಲಸದೊಡನೆ ಅತಿರೇಕ್ಕೆ ಹೋಗಬೇಕು ಎಂಬುದಾಗಿ ನಿಮ್ಮನ್ನು ಪ್ರೋತ್ಸಾಹಿಸುತ್ತಿಲ.ಲ ಆದರೆ ಯಶಸ್ಸು ಅನ್ನುವುದು ಕಳಪೆಯಾದದಲ್ಲ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು.

## ಆದ್ಯತೆಗಳು

ಪ್ರಪಂಚದಲ್ಲಿ ಎಲ್ಲವೂ ಅರ್ಥವಿವರಣೆ ವಿಷಯ ಮತ್ತು ಸಂಬಂಧಿತವಾಗಿರುವುದರಿಂದ ಪ್ರಪಂಚದಲ್ಲಿನ ದೃಷ್ಟಿಯಲ್ಲಿ ನಮ್ಮ ಆದ್ಯತೆಗಳು ನಿರಂತರವಾಗಿ ಸವಾಲು ಹೊಂದಿವೆ.

ಮತ್ತು ಮತ್ತಯ 6:33ನ್ನು ಇನ್ನೂ ಅದೇ ರೀತಿಯಲ್ಲಿ ಓದುತ್ತೇವೆ ಮತ್ತು ನಮ್ಮ ಜೀವಿತದಲ್ಲಿ ಪಾಲಿಸಬೇಕಾದ ಆದ್ಯತೆಗಳಿಗಾಗಿ ಪ್ರಾಚೀನ ಹೆಗ್ಗುರುತುಗಳಿವೆ..

**ಮಾರ್ಕ 12:29-31**
**29 ಇಸ್ರಾಯೇಲ ಜನವೇ ಕೇಳು**
**30 ನಮ್ಮ ದೇವರಾದ ಕರ್ತನು ಒಬ್ಬನೇ ದೇವರು. ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಬುದ್ದಿಯಿಂದಲೂ ಪೂರ್ಣಶಕ್ತಿಂದಲೂ ಪ್ರೀತಿಸಬೇಕು ಎಂಬದೇ ಮೊದಲನೆಯ ಆಜ್ಞೆ.**
**31 ನಿನ್ನ ನೆರೆಯವನನ್ನು ನಿನ್ನಂತೆಯೇ ಪೀತಿಸಬೇಕು ಎಂಬಂದೇ ಎರಡನೆಯ ಆಜ್ಞೆ. ಇವುಗಳಿಗಿಂತ ಹೆಚ್ಚಿನ ಆಜ್ಞೆ ಮತ್ತೊಂದಿಲ್ಲ ಎಂದು ಉತ್ತರ ಕೊಟ್ಟನು.**

**ಮತ್ತಾಯ 6:33**
**ಹೀಗಿರುವದರಿಂದ ನೀವು ಮೊದಲ ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು.**

ವಿಶ್ವಾಸಿಗಳಾಗಿ ನಮಗೆ, ದೇವರಿಗಾಗಿರುವ ನಮ್ಮ ಪ್ರೀತಿ ಮತ್ತು ದೇವರ ರಾಜ್ಯದ ಉದ್ದೇಶಗಳನ್ನು ಹಿಂಬಾಲಿಸುವುದು. ವೈಯಕ್ತಿಕ ಸೌಕರ್ಯಗಳು, ವೈಯಕ್ತಿಕ ಮಹತ್ವಾಕಾಂಕ್ಷೆ ಮುಂತಾದವುಗಳಿಗಿಂತ ಮೇಲಿನ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರಬೇಕು.

ಪ್ರಪಂಚದಲ್ಲಿ ಮನುಷ್ಯನ ಮೌಲ್ಯವು ಅವನು ಒಡೆತನದಲ್ಲಿ ಹೊಂದಿರುವುಗಳ ಮೇಲೆ ಅಳೆಯಲಾಗುತ್ತದೆ, ನಾವು ಹೊಂದಿರುವ ವಸ್ತುಗಳಿಂದ ನಾವು ಯಾರು ಎಂಬುದು ಬಹಳ ಪ್ರಾಮುಖ್ಯ ಎಂದು ನಾವು ಅರ್ಥ ಮಾಡಿಕೊಳ್ಳಬೇಕು!

**ಲೂಕ 12:15**
**ಎಲ್ಲಾ ಲೋಭಕ್ಕೂ ಎಚ್ಚರಿಕೆಯಾಗಿದ್ದು ನಿಮ್ಮನ್ನು ಕಾಪಾಡಿಕೊಳ್ಳಿರಿ. ಒಬ್ಬನಿಗೆ ಎಷ್ಟು ಆಸ್ತಿಯಿದ್ದರೂ ಅದು ಅವನಿಗೆ ಜೀವಧಾರವಾಗುವುದಿಲ್ಲ.**

### ಸಾಕ್ಷಿ

ಎಲ್ಲಾ ಸಮಯಗಳಲ್ಲಿ ನಮ್ಮ ಸಾಕ್ಷಿಯನ್ನು ಪಾಲಿಸಿಕೊಂಡು ಹೋಗುವುದು ಅಗತ್ಯವಾಗಿದೆ. ನಮ್ಮ ಸಾಕ್ಷಿಗಳು - ನಮ್ಮ ಜೀವಿತಗಳು, ನಮ್ಮ ಕ್ರಿಯೆಗಳು, ಮನೋವರ್ತನೆಗಳು ಮತ್ತು ನಡವಳಿಕೆಗಳು. ನಾವು ಒಂದು ಮಾತನ್ನು ಮಾತನಾಡದೇ ಇರುವಾಗಲೂ ನಮ್ಮ ಸುತ್ತಮುತ್ತಲಿನವರು ಮಾತನಾಡುವುದಾಗಿರುತ್ತದೆ. ನಿಂದನೆಗೆ ಮೇಲಿರುವ ಸಾಕ್ಷಿಯನ್ನು ಕಾಪಾಡಿಕೊಳ್ಳಲು ನಾವು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು ... ಯಾರು ತಪ್ಪನ್ನು ನಿಮ್ಮಲ್ಲಿ ಕಾಣದಂತಹ ಜೀವನವನ್ನು ನಡೆಸಬೇಕು. ನಾವು ಜೀವಿಸುವಂತಹ ರೀತಿಯು ನಾವು ಹಿಂಬಾಲಿಸುವಾತನಿಗೆ ಸ್ತೋತ್ರಗಳನ್ನು ತೋರಿಸುವಂತಿರಬೇಕು (1 ಪೇತ್ರನು 2:9).

## ಮದುವೆ ಮತ್ತು ಕುಟುಂಬಕ್ಕಾಗಿ ಪ್ರಾಚೀನ ಹೆಗ್ಗುರುತುಗಳು

### ಮದುವೆ

**ಇಬ್ರಿಯರಿಗೆ 13:4**
**ಗಂಡ ಹೆಂಡರ ಸಂಬಂಧವು ನಿಷ್ಕಳಂಕವಾಗಿರಬೇಕು. ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯತೀರಿಸುವನೆಂದು ತಿಳುಕೊಳ್ಳಿರಿ.**

ವಿಶ್ವಾಸಿಗಳಾಗಿ, ನಾವು ಮದುವೆಯು ದೇವರಿಂದ ಅಭಿಷೇಕಿಸಲ್ಪಟ್ಟ ಸಂಯೋಜನೆ ಎಂದು ಅರ್ಥಮಾಡಿಕೊಳ್ಳಬೇಕು. ಇದು ಜೀವಮಾನದ ಒಡಂಬಡಿಕೆಯಾಗಿದೆ. ನಾವು ಚಲಿಸದಂತಹ ಪ್ರಾಚೀನ ಹೆಗ್ಗುರುತು ಇದಾಗಿದೆ. ಡೇಟಿಂಗ್ (ಪ್ರಣಯದ ಜೊತೆಗಾರರ/ ಜೊತೆಗಾರ್ತಿ ಯಾಗಿರುವವರು) ಮಾಡುವವರು ನೀವು ಮದುವೆಯಾಗುವವರೆಗೂ ಮದುವೆಯಾಗಿಲ್ಲವೆಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಮದುವೆಯ ಜವಬ್ದಾರಿಯೊಳಗೆ ಹೆಜ್ಜೆಯನ್ನಿಡುವ ಮೊದಲು ನೀವು ವಿವಾಹಿತರ ಸವಲತ್ತುಗಳನ್ನು ಚಲಾಯಿಸಲು ಸಾಧ್ಯವಿಲ್ಲ. ಮದುವೆಯಾದವರಿಗೆ ನಿಮ್ಮ ಮದುವೆಯು ಇಬ್ಬರಿಗಾಗಿ ಮತ್ತು ಇಬ್ಬರಿಗೆ ಮಾತ್ರವೇ ರಚಿಸಲ್ಪಟ್ಟಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಆಂತರಿಕ ವೃತ್ತವನ್ನು ಪಾಲಿಸಿರಿ.

### ಕುಟುಂಬ

ಕುಟುಂಬವು ದೇವರು ರಚಿಸಿದ್ದಾಗಿದೆ. ನಿಮ್ಮ ಕುಟುಂಬಕ್ಕೆ ನೀವು ಸೇವೆ ಮಾಡುವಾಗ, ದೇವರ - ನೇಮಿತ ಸೇವೆ (ಪ್ರಸಂಗಿಸುವುದು, ಪ್ರವಾದಿಸುವುದು ಅಥವಾ ಮಹಾತ್ಕಾರ್ಯ ಮಾಡುವುದು) ಇದರಂತೆ ಹೋಲುವ ಅಥವಾ ಸಮಾನವಾದ ದೈವ-ನೇಮಿತ ಸೇವೆಯನ್ನು ನೀವು ನೆರವೇರಿಸುತ್ತೀರಿ. ಆದುದರಿಂದ ಒಬ್ಬರ ಕುಟುಂಬದ ಸೇವೆಯು ನಾವು ದೂರವಾಗುವುದಿಲ್ಲದಂತ ಪ್ರಾಚೀನ ಹೆಗ್ಗುರುತು ಆಗಿದೆ. ನಮ್ಮ ಕುಟುಂಬಗಳಲ್ಲಿ ಹೂಡಿಕೆ ಮಾಡುವುದನ್ನು ನಾವು ಆದ್ಯತೆಯನ್ನಾಗಿ ಮಾಡುತ್ತೇವೆ.

ವಿಶ್ವಾಸಿಗಳಾಗಿ ನಾವು ಭಾಗವಾಗಿರುವಂತಹ (ಸ್ಥಳೀಯಸಭೆ) ದೇವರಿಂದ ರಚಿಸಲ್ಪಟ್ಟಿರುವಂತಹದ್ದಾಗಿರುವ ದೊಡ್ಡದಾದ ಸಮುದಾಯದಲ್ಲಿ ನಾವು ನಂಬಿಕೆಯಿಟ್ಟಾಗಲೂ ರೇಖೆಗಳನ್ನು ಎಲ್ಲಿ ಎಳೆಯಲಾಗಿದೆ ಎಂಬುದರ ಕುರಿತು ತಿಳಿಯಲು ನಾವು ಬಹಳ ಜಾಗರೂಕರಾಗಿರಬೇಕು. ದೊಡ್ಡ ಸಭಾ ಸಮುದಾಯದೊಳಗೆ ಕುಟುಂಬವು ಕರಗಿಸಿಬಿಡುವುದನ್ನು ನಾವು ಅನುಮತಿಸುವುದಿಲ್ಲ.

## ತಂದೆ ತಾಯಂದಿರನ್ನು ಗೌರವಿಸುವುದು

**ಜ್ಞಾನೋಕ್ತಿಗಳು 1:8-9**
**8 ಮಗನೇ ನಿನ್ನ ತಂದೆಯ ಉಪದೇಶವನ್ನು ಕೇಳು, ನಿನ್ನ ತಾಯಿಯ ಬೋಧನೆಯನ್ನು ತೊರೆಯಬೇಡ**
**9 ಅವು ನಿನ್ನ ತಲೆಗೆ ಅಂದದ ಪುಷ್ಪ ಕಿರೀಟ ಕೊರಳಿಗೆ ಹಾರ.**

ನಮ್ಮ ತಂದೆ ತಾಯಂದಿರನ್ನು ಗೌರವಿಸುವುದು, ಘನತೆಸಲ್ಲಿಸುವುದು ಮತ್ತು ಸೇವೆ ಮಾಡುವುದು. ಹಳೆಯ ಶೈಲಿಯಂತೆ ಕಾಣಿಸಬಹುದು. ವಿಶ್ವಾಸಿಗಳಾಗಿ ನಾವು ನಮ್ಮ ತಂದೆ ತಾಯಂದಿರನ್ನು ಗೌರವಿಸಬೇಕೆಂದು ದೇವರ ವಾಕ್ಯದಿಂದ ನಾವು ಸಲಹೆ ಹೊಂದಿದ್ದೇವೆ. (ಎಫೆಸದವರಿಗೆ 6:1-3) ನಾವು ತ್ಯಜಿಸಬಾರದ ಒಂದು ದೈವಿಕ ಸಂಪ್ರದಾಯ ಇದಾಗಿದ

# 5. ಕೆಲಸದ ಸ್ಥಳಕ್ಕಾಗಿ ಪ್ರಾಚೀನ ಹೆಗ್ಗುರುತುಗಳು

ವೈಯಕ್ತಿಕ ಜೀವಿತ ಮತ್ತು ನಡವಳಿಕೆಗಾಗಿ ನಾವು ಚರ್ಚಿಸಿದ್ದಂತಹ ಅದೇ ರೀತಿಯ ಪ್ರಾಚೀನ ಹೆಗ್ಗುರುತುಗಳು ಕೆಲಸದ ಸ್ಥಳಗಳಿಗೂ ಸಹ ಅನ್ವಯಿಸುತ್ತವೆ. ನಿಮ್ಮ ವೃತ್ತಿಪರ ಪ್ರಪಂಚಕ್ಕೆ ಇಂತಹ ಪ್ರಾಚೀನ ಹೆಗ್ಗುರುತುಗಳನ್ನು ಕೊಂಡೊಯ್ಯಿರಿ. ಹೊಸ ಪ್ರಪಂಚದ ಸಂಸ್ಕೃತಿಯು ಇಂತಹ ಪ್ರಾಚೀನ ಹೆಗ್ಗುರುತುಗಳೊಂದಿಗೆ ರಾಜಿಮಾಡಿಕೊಳ್ಳಲು ಕಾರಣವಾಗಲು ಅವಕಾಶ ನೀಡಬೇಡಿರಿ.

## ಸ್ವಾತಂತ್ರ್ಯ

ಕೆಲಸದ ಸ್ಥಳದಲ್ಲಿ ನೌಕರರು ಬರೀ "ಕೆಲಸಗಾರರಂತೆ" ಇರದೇ ಸಂಘ ಸಂಸ್ಥೆಯ ಭಾಗವೆಂದು ಭಾವಿಸುವಂತೆ ಮಾಡಲೂ ಎಲ್ಲಾ ಬಗೆಯ ಪದ್ಧತಿಗಳು ಮತ್ತು ಅಭಿದಾನಗಳನ್ನು ಇಂದು ನಾವು ಉಪಯೋಗಿಸುತ್ತೇವೆ. ಜನರು ಸ್ವತಂತ್ರರಾಗಿರಬೇಕು ಮತ್ತು ಇನ್ನೂ ಕಾರ್ಯ ಕ್ಷಮತೆಯನ್ನು ನಾವು ಅಪೇಕ್ಷಿಸುತ್ತೇವೆ. ಅನೇಕ ಸಮಯಗಳಲ್ಲಿ ನೌಕರರು ಶಿಸ್ತಿನ ಕೊರತೆಯನ್ನು ಅರ್ಥೈಸುವ ಸ್ವಾತಂತ್ರ್ಯವನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ.

